# ವೇದಾಂತಬಾಲಬೋಧೆ

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1992

Table of Contents

ಅಧ್ಯಾತ್ಮಗ್ರಂಥಾವಳಿ

# ವೇದಾಂತಬಾಲಬೋಧೆ

ಶ್ರೀಮದ್ಭಗವತ್ಪಾದಾಚಾರ್ಯಕೃತ ಪ್ರಾತಃಸ್ಮರಣಸ್ತೋತ್ರದ
ವ್ಯಾಖ್ಯಾನರೂಪವಾದ ಕನ್ನಡ ಪ್ರಶ್ನೋತ್ತರಿ

ಬರೆದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೨೮

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1992

ಮೊದಲನೆಯ ಮುದ್ರಣ 1922
ಎರಡನೆಯ ಮುದ್ರಣ 1942
ಮೂರನೆಯ ಮುದ್ರಣ 1963
ನಾಲ್ಕನೆಯ ಮುದ್ರಣ 1992
೨೦೦೦ ಪ್ರತಿಗಳು

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
( All Rights Reserved )

ಮುದ್ರಣಸ್ಥಾನ :
ಅಧ್ಯಾತ್ಮಪ್ರಕಾಶಮುದ್ರಣಾಲಯ,
ಹೊಳೆನರಸೀಪುರ.
1992

# ಮುನ್ನುಡಿ

ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ವೇದಾಂತಶಾಸ್ತ್ರಪರಿಚಯವನ್ನು ಬಯಸುವ ಪ್ರಾರಂಭಿಕ ಓದುಗರಿಗಾಗಿ ಶ್ರೀಭಗವತ್ಪಾದಾಚಾರ್ಯರ 'ಪ್ರಾತಃಸ್ಮರಣಸ್ತೋತ್ರ'ವೆಂಬ ಪುಟ್ಟ ಪ್ರಕರಣಗ್ರಂಥವನ್ನು ಆಧರಿಸಿ ಪ್ರಶ್ನೋತ್ತರರೂಪವಾಗಿ ಸುಲಭಶೈಲಿಯಲ್ಲಿ ಈ ಗ್ರಂಥವನ್ನು ರಚಿಸಿದ್ದಾರೆ. ಇದೇ ಗ್ರಂಥವನ್ನು ಶ್ರೀಶ್ರೀಗಳವರು ಸಂಸ್ಕೃತ ಭಾಷೆಯಲ್ಲಿಯೂ 'ವೇದಾಂತಬಾಲಬೋಧಿನೀ' ಎಂಬ ಹೆಸರಿನಿಂದ ಸಿದ್ಧಗೊಳಿಸಿದ್ದಾರೆ. ಅದು ಕೂಡ ಪ್ರಕಟವಾಗಿದೆ.

ಶ್ರೀಶಂಕರಭಗವತ್ಪಾದರವರು ಪ್ರಸ್ಥಾನತ್ರಯಭಾಷ್ಯಗಳಲ್ಲಿ ಪ್ರತಿಪಾದಿಸಿರುವ ಪ್ರಕ್ರಿಯೆಗೆ ವಿರುದ್ಧವಾದ ಯಾವ ವಿಚಾರಗಳೂ ಈ ಪ್ರಕರಣದಲ್ಲಿ ಕಂಡುಬರುವದಿಲ್ಲವಾದ್ದರಿಂದ ಇದನ್ನು ಆದಿಶಂಕರಾಚಾರ್ಯರ ಕೃತಿಯೆಂದೇ ಸ್ವೀಕರಿಸಲು ಅಡ್ಡಿಯಿಲ್ಲ.

ಅಧ್ಯಾತ್ಮಪ್ರಕಾಶಕಾರ್ಯಾಲಯದವರು ನಾಲ್ಕನೆಯ ಬಾರಿಗೆ ಈ ಗ್ರಂಥವನ್ನು ಪುನರ್ಮುದ್ರಿಸಿ ಪ್ರಕಟಿಸಿದ್ದಾರೆ. ವಾಚಕರು ಎಂದಿನಂತೆ ಪ್ರೋತ್ಸಾಹಿಸುವರೆಂದು ನಂಬಿದೆ.

ಇತಿ–

ಹೊಳೆನರಸೀಪುರ
ತಾ॥ 1–5–1992

ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,
ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

# ಪೀಠಿಕೆ

ಕನ್ನಡದಲ್ಲಿ ವೇದಾಂತದ ಗ್ರಂಥಗಳು ಅನೇಕವಾಗಿವೆಯಾದರೂ ಈ ದರ್ಶನದ ಮುಖ್ಯಸಿದ್ಧಾಂತವೇನೆಂಬುದನ್ನು ತಿಳಿಯಿಸುವದಕ್ಕೇ ಹೆಚ್ಚು ಲಕ್ಷ್ಯವನ್ನು ಕೊಡದೆ ಯೋಗ, ಸಾಂಖ್ಯ, ನ್ಯಾಯ – ಮುಂತಾದ ದರ್ಶನ ಗಳನ್ನೂ ಅಲ್ಲಲ್ಲಿ ಬೆರೆಯಿಸಿರುವದರಿಂದ ವಿಷಯವನ್ನು ತಿಳಿಯಬೇಕೆಂಬವರಿಗೆ ತೊಡಕುಂಟಾಗುತ್ತಿರುವದು ಕಂಡುಬಂದಿದೆ. ಈ ಹೊಸ ಗ್ರಂಥಗಳು ಈಚೆಗೆ ಬರೆಯಲ್ಪಟ್ಟ ಭಾಷ್ಯವಾರ್ತಿಕಗಳಿಗೆ ವಿರುದ್ಧವಾಗಿರುವ ಕೆಲವು ಸಂಸ್ಕೃತಗ್ರಂಥ ಗಳ ಆಧಾರದ ಮೇಲೆ ಬರೆದಿರುವಹಾಗೂ ತೋರುತ್ತದೆ. ಇದಲ್ಲದೆ ದೊಡ್ಡ ದೊಡ್ಡ ಸಂಸ್ಕೃತಶಬ್ದಗಳು, ಅರ್ಥವನ್ನು ವಿವರಿಸದೆ ಹೇರಳವಾಗಿ ಉಪ ಯೋಗಿಸುವ ಪಾರಿಭಾಷಿಕಶಬ್ದಗಳು – ಇವುಗಳೂ ವಿಷಯವನ್ನು ನಿಶ್ಚಯ ಮಾಡಿಕೊಳ್ಳುವದಕ್ಕೆ ಅಡ್ಡಿಯಾಗಿರುತ್ತವೆ. ಈ ಕಾರಣಗಳಿಂದ ವೇದಾಂತ ತತ್ತ್ವವನ್ನು ಅರಿಯಬೇಕೆಂಬ ನಿಜವಾದ ಮುಮುಕ್ಷುಗಳೂ ನಿರುತ್ಸಾಹ ರಾಗುವ ಸಂಭವವುಂಟು.

ಈ ಕೊರತೆಗಳನ್ನು ಸಾಧ್ಯವಾದಮಟ್ಟಿಗೆ ಹೋಗಲಾಡಿಸುವದಕ್ಕಾಗಿ ಈ ಅಧ್ಯಾತ್ಮಗ್ರಂಥಾವಳಿಯನ್ನು ಪ್ರಾರಂಭಿಸಿರುತ್ತದೆ. ವೇದಾಂತವಿಚಾರವೆಲ್ಲ "ಬ್ರಹ್ಮ ಸತ್ಯವು, ಜಗತ್ತು ಮಿಥ್ಯೆಯು" ಎಂಬ ಎರಡೇ ವಿಷಯಗಳನ್ನು ಅಡಕಮಾಡಿಕೊಂಡಿರುವದರಿಂದ ಈ ಎರಡು ಸಂಗತಿಗಳಿಗೇ ಇಲ್ಲಿ ಹೆಚ್ಚು ಲಕ್ಷ್ಯವನ್ನು ಕೊಟ್ಟಿರುತ್ತದೆ. ಇಲ್ಲಿ ಬರೆದಿರುವ ವಿಚಾರಗಳನ್ನು ಇನ್ನೂ ಬೆಳೆಯಿಸಬಹುದಾಗಿದ್ದರೂ ಓದುವವರ ಮನಸ್ಸಿನಲ್ಲಿ ಹೆಚ್ಚು ಗಲಭೆ ಯುಂಟಾಗದಂತೆ ಒಟ್ಟುಸಿದ್ಧಾಂತವನ್ನು ಮಟ್ಟಿಗೆ ತಿಳಿಯಿಸುತ್ತಾ ಹೋಗಿದೆ. ಬಾಲಬೋಧೆಯಾದ ಈ ಮೊದಲನೆಯ ಗ್ರಂಥಲ್ಲಿ ಯಾವ ಪ್ರಮಾಣವಾಕ್ಯ ವನ್ನೂ ಕೊಟ್ಟಿಲ್ಲವಾದರೂ ಯಾವ ವಿಷಯವೂ ಭಾಷ್ಯವಾರ್ತಿಕಗಳಿಗೆ ವಿರೋಧವಾಗಿರದಂತೆ ನೋಡಿಕೊಂಡು ಬರೆದಿರುತ್ತದೆ. ಇದೇ ಗ್ರಂಥಾವಳಿಯ

ಮುಂದಿನ ಪ್ರಕರಣಗಳಲ್ಲಿ ಅವಕಾಶ ದೊರೆತಂತೆ ಹೆಚ್ಚು ವಿಷಯಗಳನ್ನು ಸಪ್ರಮಾಣವಾಗಿ ಬರೆಯಲಾಗಿದೆ. ಪಾರಿಭಾಷಿಕಶಬ್ದಗಳು ಮೊದಲನೆಯ ಸಲ ಬಂದಾಗ ಅವನ್ನು ಅಲ್ಲಲ್ಲಿಯೇ ವಿವರಿಸಿರುವದಲ್ಲದೆ ಓದುವವರ ಸೌಕರ್ಯ ಕ್ಕಾಗಿ ಅವುಗಳ ಪಟ್ಟಿಯನ್ನು ಕೊನೆಯ ಪುಟಗಳಲ್ಲಿ ಕೊಟ್ಟಿರುತ್ತದೆ. ಮುಖ್ಯ ವಾಗಿ ವೇದಾಂತವು ಅನುಭವಶಾಸ್ತ್ರವಾದ್ದರಿಂದ ಸದ್ಗುರುವಿನ ಉಪದೇಶ, ಶಾಸ್ತ್ರಾರ್ಥವಿಚಾರ, ಮತ್ತು ತನ್ನ ಅನುಭವ – ಈ ಮೂರಕ್ಕೂ ಹೊಂದು ಗಡೆಯಾದ ಹೊರತು ಯಾರೂ ವಿಷಯವನ್ನು ಮನಗಂಡಂತೆ ಹೇಳುವ ಹಾಗಿಲ್ಲ. ಈ ಗ್ರಂಥಾವಳಿಯು ಇಂಥ ಹೊಂದುಗಡೆಗೆ ಎಷ್ಟರಮಟ್ಟಿಗೆ ಸಹಕಾರಿಯೆಂಬುದನ್ನು ವಾಚಕರೇ ನಿಶ್ಚಯಿಸತಕ್ಕದ್ದಾಗಿದೆ.

ವೇದಾಂತಪ್ರಕ್ರಿಯೆಯನ್ನೇ ಒಳಗೊಂಡಿರುವ ಈ ಅಮೋಘವಾದ ಪ್ರಕರಣವು ಶ್ರೀಭಗವತ್ಪಾದಾಚಾರ್ಯವಿರಚಿತವೆಂದು ಇಲ್ಲಿ ಹೇಳಿರು ತ್ತದೆ. ಇದು ಈ ಹೆಸರಿನಿಂದ ಸುಪ್ರಸಿದ್ಧರಾಗಿರುವ ಶ್ರೀಮಚ್ಛಂಕರಾಚಾರ್ಯ ರದೇ ಆಗಿರಬೇಕೆಂದು ತೋರುತ್ತದೆ. ಇದು ಹೇಗಾದರೂ ಇರಲಿ, ಈ ಗ್ರಂಥವು ಸಾಕ್ಷಾದ್ಭಗವತ್ಪಾದಾಚಾರ್ಯಕೃತವೆಂದೇ ಎಣಿಸುವಷ್ಟು ತುಂಬ ಬೆಲೆಯುಳ್ಳ ದ್ದೆಂದು ಹೇಳಲು ಯಾವ ಸಂಶಯವೂ ಇಲ್ಲ. ಈ ಗ್ರಂಥರತ್ನವನ್ನು ವಾಚಕ ರಿಗೆ ಸಮರ್ಪಿಸುವ ಸುಯೋಗವನ್ನು ನನಗೆ ದೊರಕಿಸಿಕೊಟ್ಟ ಪರಮಾತ್ಮನನ್ನು ನಿತ್ಯವೂ ನಮಸ್ಕರಿಸುತ್ತಿರುವೆನು.

ಇತಿ

ಗ್ರಂಥಕರ್ತ.

# ವಿಷಯಾನುಕ್ರಮಣಿಕೆ


| ವಿಷಯ | ಪುಟಗಳು |
| --- | --- |
| ೧. ಸಂಪಾದಕರ ಮುನ್ನುಡಿ | (೩) |
| ೨. ಪೀಠಿಕೆ | (೪–೫) |
| ೩. ವಿಷಯಪ್ರವೇಶ | (೧) |
| ೪. ಅವಸ್ಥಾತ್ರಯಸಾಕ್ಷಿಯೇ ಬ್ರಹ್ಮವು | ೨–೨೪ |
| ಆತ್ಮನು ಹೃದಯದಲ್ಲಿ ಬೆಳಗುತ್ತಿರುವನು – ಆತ್ಮನು ಅವಸ್ಥಾತ್ರಯ ಸಾಕ್ಷಿಯು – ಆತ್ಮನು ಸತ್ಯಜ್ಞಾನಾನಂದಸ್ವರೂಪನು – ಆತ್ಮನು ತುರೀಯನು – ಆತ್ಮನು ಪರಮಹಂಸರಿಗೇ ದೊರತಕ್ಕವನು – ಆ ಬ್ರಹ್ಮವೇ ನಾನು, ನಾನು ಭೂತಸಂಘವಲ್ಲ. | |
| ೫. ಆತ್ಮನು ಸ್ವಯಂಪ್ರಕಾಶನು | ೨೫–೩೦ |
| ಆತ್ಮನನ್ನು ವೇದಗಳು ತಿಳಿಯಿಸುವ ರೀತಿ – ಆತ್ಮನು ಮನಸ್ಸಿಗಾಗಲಿ ಮಾತಿಗಾಗಲಿ ವಿಷಯನಲ್ಲ – ಆತ್ಮನು ದೇವದೇವನು, ಅಜನು, ಅಚ್ಯುತನು – ಆತ್ಮನನ್ನೇ ಭಜಿಸಬೇಕು. | |
| ೬. ಎಲ್ಲವೂ ನಿಜವಾಗಿ ಆತ್ಮನೇ | ೩೧–೩೮ |
| ಅನಾತ್ಮವೆಂಬುದೂ ಆತ್ಮನೇ – ಹಗ್ಗದಹಾವಿನ ದೃಷ್ಟಾಂತ – ಆತ್ಮನು ಅಜ್ಞಾನದ ಸೋಂಕಿಲ್ಲದ ಚೈತನ್ಯಪ್ರಕಾಶವು–ಆತ್ಮನು ಪೂರ್ಣನು, ಸನಾತನನು, ಪುರುಷೋತ್ತಮನು – ಆತ್ಮನನ್ನೇ ನಮಸ್ಕರಿಸಬೇಕು. | |
| ೭. ಈ ಸ್ತೋತ್ರವನ್ನು ಹೇಳಿಕೊಳ್ಳುವವರಿಗೆ ಫಲ | ೩೯–೪೦ |
| ೮. ಶಬ್ದಾನುಕ್ರಮಣಿಕೆ | ೪೧–೪೨ |

|| ಓಂ ||

# ವೇದಾಂತಬಾಲಬೋಧೆ

## ವಿಷಯಪ್ರವೇಶ

ಲೋಕದಲ್ಲಿ ಜನರು ಬೆಳಿಗ್ಗೆ ಹಾಸಿಗೆಯಿಂದ ಏಳುತ್ತಲೂ ಸಂಸಾರದ ಚಿಂತೆಯನ್ನು ಮನಸ್ಸಿಗೆ ತಂದುಕೊಂಡು ರಾತ್ರಿ ಮತ್ತೆ ಮಲಗುವವರೆಗೂ ಹೆಂಡಿರುಮಕ್ಕಳು, ಹೊಲಮನೆ, ಹಣಕಾಸು- ಮುಂತಾದವುಗಳ ವಿಚಾರ ದಲ್ಲಿಯೇ ಮಗ್ನರಾಗಿ ದೇಹವೇ ಮೊದಲಾದವುಗಳಲ್ಲಿ ನಾನು, ನನ್ನದು-ಎಂಬ ಅಭಿಮಾನಗಳನ್ನು ಬೆಳೆಯಿಸಿಕೊಳ್ಳುತ್ತಾ ತಮ್ಮ ಆತ್ಮಸ್ವರೂಪವನ್ನು ಅರಿತು ಕೊಳ್ಳುವದಕ್ಕೆ ಅವಕಾಶವೇ ಇಲ್ಲದಂತೆ ಸುಖದುಃಖಗಳಿಂದ ವ್ಯಥೆಪಡುತ್ತಲೇ ಇರುವದನ್ನು ಕಂಡು ಕನಿಕರದಿಂದ ಶ್ರೀಭಗವತ್ಪಾದಾಚಾರ್ಯರವರು "ಆ ಸುಪ್ತೇರಾಮೃತೇಃ ಕಾಲಂ ನಯೇದ್ವೇದಾನ್ತಚಿನ್ತಯಾ" (ಬೆಳಿಗ್ಗೆ ಎಚ್ಚತ್ತಾಗಿನಿಂದ ರಾತ್ರಿ ನಿದ್ರೆಹತ್ತುವವರೆಗೂ, ನಮಗೆ ಬುದ್ಧಿ ಬಂದಾಗಿನಿಂದ ಸಾಯುವವರೆಗೂ ವೇದಾಂತವಿಚಾರದಿಂದಲೇ ಕಾಲವನ್ನು ಕಳೆಯುತ್ತಿರ ಬೇಕು) ಎಂಬ ನ್ಯಾಯವನ್ನನುಸರಿಸಿ ಸಮಸ್ತ ಉಪನಿಷತ್ತುಗಳ ಅರ್ಥದ ಸಾರವನ್ನೂ ಸಂಗ್ರಹವಾಗಿ ಒಳಗೊಂಡಿರುವ " ಪ್ರಾತಃಸ್ಮರಣಸ್ತೋತ್ರ " ವೆಂಬ ಪ್ರಕರಣವನ್ನು ಲೋಕಾನುಗ್ರಹಕ್ಕಾಗಿ ಬರೆದಿರುತ್ತಾರೆ.

ಉಪನಿಷತ್ತುಗಳಿಗೆ ವೇದಾಂತಗಳೆಂಬ ಮತ್ತೊಂದು ಹೆಸರೂ ಉಂಟು. ಆದ್ದರಿಂದ ಅವುಗಳಲ್ಲಿ ಹೇಳಿರುವ ದರ್ಶನವನ್ನು ವೇದಾಂತವೆಂದೇ ಕರೆಯು ತ್ತಾರೆ. ವೇದಾಂತದ ಮೂರು ಮುಖ್ಯ ಉಪದೇಶಗಳನ್ನು ಇಲ್ಲಿ ವಿಶದಗೊಳಿ ಸಿರುತ್ತದೆ : (೧) ಅವಸ್ಥಾತ್ರಯಸಾಕ್ಷಿಯಾದ ನಮ್ಮ ಆತ್ಮನು ಸಚ್ಚಿದಾನಂದ ರೂಪವಾದ ಬ್ರಹ್ಮವಾಗಿರುತ್ತಾನೆ. (೨) ಸ್ವಯಂಪ್ರಕಾಶನಾದ ಈ ಆತ್ಮನನ್ನು ಮಾತುಗಳಿಂದ ವರ್ಣಿಸುವದಕ್ಕಾಗಲಿ ಮನಸ್ಸಿನಿಂದ ವಿಷಯವಾಗಿಸಿ ಅರಿತು ಕೊಳ್ಳುವದಕ್ಕಾಗಲಿ ಆಗಲಾರದು. (೩) ಜಗತ್ತೆಲ್ಲವೂ ಈ ಆತ್ಮನಲ್ಲಿ ತೋರುವ ಮಾಯಾಮಾತ್ರವಾಗಿದೆ : ಈ ಆತ್ಮನೇ ಎಲ್ಲಾ ರೂಪಗಳಿಂದಲೂ ತೋರಿಕೊಳ್ಳುತ್ತಿದ್ದಾನೆ.

ಈ ಉಪದೇಶಗಳು ಶಾಸ್ತ್ರಪರಿಚಯವಿಲ್ಲದವರಿಗೂ ಸುಲಭವಾಗಿ ತಿಳಿಯುವಂತೆ ನಾವು ಈ "ವೇದಾಂತಬಾಲಬೋಧೆ"ಯಲ್ಲಿ ವಿವರಿಸುವೆವು.

# ೧. ಅವಸ್ಥಾತ್ರಯಸಾಕ್ಷಿಯೇ ಬ್ರಹ್ಮವು

**ಪ್ರಾತಃ ಸ್ಮರಾಮಿ ಹೃದಿ ಸಂಸ್ಫುರದಾತ್ಮತತ್ತ್ವಂ**
**ಸಚ್ಚಿತ್ಸುಖಂ ಪರಮಹಂಸಗತಿಂ ತುರೀಯಮ್ ।**
**ಯತ್ಸ್ವಪ್ನಜಾಗರಸುಷುಪ್ತಮವೈತಿ ನಿತ್ಯಂ**
**ತದ್ಬ್ರಹ್ಮ ನಿಷ್ಕಲಮಹಂ ನ ಚ ಭೂತಸಙ್ಘಃ ॥೧॥**

ಪ್ರತಿಪದಾರ್ಥ :– ಯತ್–ಯಾವದು, ನಿತ್ಯಮ್–ಯಾವಾಗಲೂ, ಸ್ವಪ್ನಜಾಗರಸುಷುಪ್ತಮ್– ಕನಸು, ಎಚ್ಚರ, ನಿದ್ರೆ ಎಂಬ ಅವಸ್ಥೆಗಳನ್ನು, ಅವೈತಿ–ಹೊಂದುತ್ತಿರುವದೋ, ತುರೀಯಮ್– ನಾಲ್ಕನೆಯದಾಗಿರುವ, ಸಚ್ಚಿತ್ಸುಖಮ್–ಸಚ್ಚಿದಾನಂದರೂಪವಾದ, ಪರಮಹಂಸಗತಿಮ್–ಪರಮಹಂಸರಿಗೆ ಗತಿಯಾಗಿರುವ, ತತ್–ಆ, ಹೃದಿ– ಹೃದಯದಲ್ಲಿ, ಸಂಸ್ಫುರತ್– ಚೆನ್ನಾಗಿ ಬೆಳಗುತ್ತಿರುವ, ಆತ್ಮತತ್ತ್ವಮ್– ಆತ್ಮಸ್ವರೂಪವನ್ನು, ಪ್ರಾತಃ– ಬೆಳಗಿನಹೊತ್ತಿನಲ್ಲಿ, ಸ್ಮರಾಮಿ–ಸ್ಮರಿಸುತ್ತೇನೆ, ಅಹಮ್– ನಾನು, ತತ್– ಆ, ನಿಷ್ಕಲಮ್– ಅವಯವರಹಿತವಾದ, ಬ್ರಹ್ಮ–ಬ್ರಹ್ಮವೇ, ಭೂತಸಙ್ಘಃ–ಭೂತಗಳ ಸಮೂಹವು, ನ ಚ–ಅಲ್ಲ.

೧. ಯಾವದು ಯಾವಾಗಲೂ ಕನಸು, ಎಚ್ಚರ, ನಿದ್ರೆ–ಎಂಬ ಮೂರು ಅವಸ್ಥೆಗಳನ್ನೂ ಅನುಭವಿಸುತ್ತಿರುವದಾಗಿ ಇವುಗಳಿಗೆ ನಾಲ್ಕನೆಯದಾಗಿರುವದೋ, ಆ ಹೃದಯದಲ್ಲಿ ಬೆಳಬೆಳಗುತ್ತಿರುವ, ಸಚ್ಚಿದಾನಂದಸ್ವರೂಪವಾದ, ಪರಮಹಂಸರಿಗೆ ಮಾತ್ರ ದೊರಕತಕ್ಕ ಆ ಆತ್ಮತತ್ತ್ವವನ್ನು ಬೆಳಗ್ಗೆ ಸ್ಮರಿಸುತ್ತೇನೆ. ನಾನು ಆ ಅವಯವಗಳಿಲ್ಲದ ಬ್ರಹ್ಮವೇ ಹೊರತು ಭೂತಗಳ ಸಮೂಹವಲ್ಲ.

## ಆತ್ಮನು ಹೃದಯದಲ್ಲಿ ಬೆಳಗುತ್ತಿರುವನು

( ಹೃದಿ ಸಂಸ್ಫುರದಾತ್ಮತತ್ತ್ವಮ್ )

**ಪ್ರಶ್ನೆ :** 'ಹೃದಯದಲ್ಲಿ ಬೆಳಗುವದು' ಎಂದರೇನರ್ಥ ?

ಉತ್ತರ : ಹೃದಯವೆಂದರೆ ಮನಸ್ಸು ; ಇದರಲ್ಲಿ ಬೆಳಗುವದು ಎಂದರೆ ತೋರುವದು ಎಂದರ್ಥ.

ಪ್ರಶ್ನೆ : ಎಲ್ಲವೂ ಮನಸ್ಸಿನಲ್ಲಿಯೇ ತೋರುತ್ತದೆಯಲ್ಲವೆ ? ಆತ್ಮ ತತ್ತ್ವವು ಮನಸ್ಸಿನಲ್ಲಿ ತೋರುತ್ತದೆ ಎಂಬಲ್ಲಿ ವಿಶೇಷವೇನು ?

ಉತ್ತರ : ಉಳಿದ ಎಲ್ಲಾ ಪದಾರ್ಥಗಳೂ ಮನಸ್ಸಿಗೆ ತೋರುವವು – ಎಂದರೆ ಮನಸ್ಸು ಅವುಗಳನ್ನು ಅರಿಯುತ್ತದೆ. ಆದರೆ ಆತ್ಮತತ್ತ್ವವು ಮನಸ್ಸಿನಲ್ಲಿ ತೋರುವದು – ಎಂದರೆ ಮನಸ್ಸು ಇದನ್ನು ಅರಿಯುವದಿಲ್ಲ. ಇದು ಇರುತ್ತದೆಯೆಂಬುದು ಮನಸ್ಸಿನಲ್ಲಿಯೇ ಒಡೆದುಕಾಣುತ್ತದೆ. ಉದಾಹರಣೆಗೆ 'ಕಣ್ಣಿಗೆ ಒಂದು ಪೆಟ್ಟಿಗೆ ಕಾಣಿಸುತ್ತದೆ.' ಎಂದರೆ ಹೊರಗಿರುವ ಪೆಟ್ಟಿಗೆಯು ಕಣ್ಣಿಗೆ ಗೋಚರವಾಗುತ್ತದೆ ಎಂದರ್ಥ. ಆದರೆ 'ಕಣ್ಣಿನಲ್ಲಿ ನೋವು ಕಾಣುತ್ತಿದೆ' ಎಂದರೆ ಕಣ್ಣಿನಲ್ಲಿ ನೋವಿರುವದು ಅನುಭವಕ್ಕೆ ಬರುತ್ತದೆ–ಎಂದರ್ಥವೇ ಹೊರತು ಕಣ್ಣುನೋವನ್ನು ಪೆಟ್ಟಿಗೆಯಂತೆ ನೋಡುತ್ತೇವೆ ಎಂದೇನೂ ಅರ್ಥವಲ್ಲ. ಯಾವದು ನೋಡುವದೋ ಅದು ವಿಷಯಿ. ವಿಷಯಿಯು ಯಾವದನ್ನು ನೋಡುವದೋ ಅದು ವಿಷಯ. ಮನಸ್ಸಿಗೆ ಮಿಕ್ಕದ್ದೆಲ್ಲವೂ ಗೋಚರವಾಗುತ್ತಿರುವದರಿಂದ ಎಲ್ಲಾ ಪದಾರ್ಥಗಳೂ ಮನಸ್ಸಿಗೆ ವಿಷಯವಾಗಿರುತ್ತವೆ. ಆದರೆ ಮನಸ್ಸು ಆತ್ಮನನ್ನು ನೋಡಲಾರದು ; ಆದ್ದರಿಂದ ಆತ್ಮನು ಮನಸ್ಸಿಗೆ ವಿಷಯನಲ್ಲ.

ಪ್ರಶ್ನೆ : ಹಾಗಾದರೆ ಆತ್ಮನು ಯಾವದಕ್ಕೂ ವಿಷಯನೇ ಅಲ್ಲವೆ ? ತನ್ನನ್ನು ನೋಡುವ ವಿಷಯಿಯೇ ಇಲ್ಲದಿದ್ದರೆ ಅವನು ಇಲ್ಲವೆಂದೇ ಆಗುವದಲ್ಲ! ಆತ್ಮನು ಇರುವನೆಂಬುದು ನಮಗೆ ಗೊತ್ತಾಗುವ ಬಗೆ ಹೇಗೆ ?

ಉತ್ತರ : ಎಲ್ಲಾ ವಸ್ತುಗಳೂ ತಮಗೆ ವಿಷಯಿಯೊಂದಿದ್ದರೇ ತೋರಿಕೊಳ್ಳುವವೆಂಬ ನಿಯಮವಿಲ್ಲ. ಯಾವ ವಸ್ತು ತಾನೇ ಬೆಳಗಲಾರದೋ ಅದಕ್ಕೆ ವಿಷಯಿ ಬೇಕು. ಉದಾಹರಣೆಗೆ ಮನೆಯಲ್ಲಿರುವ ದೀಪವು ಅಲ್ಲಿರುವ ಪದಾರ್ಥಗಳೆಲ್ಲವನ್ನೂ ತನ್ನ ಬೆಳಕಿನಿಂದ ತೋರಿಸುತ್ತದೆ ; ಆದರೆ ತನ್ನನ್ನು ತೋರಿಸುವದಕ್ಕೆ ಅದು ಮತ್ತೊಂದು ಬೆಳಕು ಬೇಕೆನ್ನುವದಿಲ್ಲ. ನೀರೇ ಮುಂತಾದ ವಸ್ತುಗಳಿಗೆ ಬಿಸಿ ಎಂಬ ಗುಣವು ಬರಬೇಕಾದರೆ ಆದಕ್ಕೆ

ಅಗ್ನಿಯ ಸಂಬಂಧವು ಬೇಕು ; ಆದರೆ ಬೆಂಕಿಯಲ್ಲಿ ಸ್ವಭಾವವಾಗಿಯೇ ಬಿಸಿ ಇದ್ದುಕೊಂಡಿರುವದರಿಂದ ಅದಕ್ಕೆ ಈ ಗುಣ ಬರುವದಕ್ಕೆ ಮತ್ತೊಂದರ ಸಹಾಯವು ಬೇಕಾಗಿರುವದಿಲ್ಲ. ಹೀಗೆಯೇ ಯಾವದು ತಾನೇ ತೋರಿಕೊಳ್ಳಲಾರದೋ ಅಂಥ ವಸ್ತುವನ್ನು ಅರಿಯುವದಕ್ಕೆ ಕಣ್ಣು, ಕಿವಿ – ಮುಂತಾದ ಇಂದ್ರಿಯಗಳ ಮತ್ತು ಮನಸ್ಸಿನ ಸಹಾಯವು ಬೇಕಾಗುವದು ; ಆದರೆ ತಾನೇ ಬೆಳಗುವ ಸ್ವಭಾವವುಳ್ಳ ಆತ್ಮನನ್ನು ಬೆಳಗುವದಕ್ಕೆ ಮತ್ತೊಂದು ವಿಷಯಿ ಬೇಕಿಲ್ಲ. ಈ ಅಭಿಪ್ರಾಯದಿಂದಲೇ ಶ್ಲೋಕದಲ್ಲಿ 'ಹೃದಿ ಸಂಸ್ಫುರತ್' (ಮನಸ್ಸಿನಲ್ಲಿ ಚೆನ್ನಾಗಿ ತಾನೇ ಬೆಳಗುತ್ತಿರುವ) ಎಂಬ ವಿಶೇಷಣವನ್ನು ಕೊಟ್ಟಿರುತ್ತದೆ.

## ಆತ್ಮನು ಅವಸ್ಥಾತ್ರಯಸಾಕ್ಷಿಯು

(ಯತ್ಸ್ವಪ್ನಜಾಗರಸುಷುಪ್ತಮವೈತಿ ನಿತ್ಯಮ್)

ಪ್ರಶ್ನೆ : ಮನಸ್ಸಿದ್ದರೆ ಮಾತ್ರ ತೋರುವ ಮಿಕ್ಕ ವಿಷಯಗಳಿಗಿಂತ ಆತ್ಮನಲ್ಲಿ ಯಾವ ವಿಶೇಷವಿದೆ ? ಆತ್ಮನು ತೋರುವದಕ್ಕೂ ಮನಸ್ಸು ಬೇಕೇಬೇಕಲ್ಲವೆ ? ಹೀಗಿರುವಲ್ಲಿ ಮಿಕ್ಕ ವಿಷಯಗಳಿಗೆ ಮತ್ತೊಂದು ವಿಷಯಿಯ ಅಪೇಕ್ಷೆಯುಂಟೆಂದೂ ಆತ್ಮನಿಗೆ ಇಲ್ಲವೆಂದೂ ಹೇಳುವದಕ್ಕೆ ಆಧಾರವೇನು ?

ಉತ್ತರ : ಆತ್ಮನಿಗೆ ಯಾವಾಗಲೂ ಮನಸ್ಸಿನ ಅಪೇಕ್ಷೆ ಇದೆ ಎಂದು ತಿಳಿಯುವದು ತಪ್ಪು. ಏಕೆಂದರೆ ಮನಸ್ಸಿನ ಅಪೇಕ್ಷೆಯಿಲ್ಲದೆಯೇ ಆತ್ಮನು ಬೆಳಗುತ್ತಿರುತ್ತಾನೆ. ಇಷ್ಟೇ ಅಲ್ಲ. ಮನಸ್ಸನ್ನೂ ಆತ್ಮನೇ ಬೆಳಗುತ್ತಿದ್ದಾನೆ. ಇದನ್ನು ಅವಸ್ಥಾತ್ರಯಪರೀಕ್ಷೆಯಿಂದ ಗೊತ್ತುಪಡಿಸಿಕೊಳ್ಳಬಹುದು.

ಪ್ರಶ್ನೆ : ಅವಸ್ಥಾತ್ರಯವೆಂದರೇನು ?

ಉತ್ತರ : ಕನಸು, ಎಚ್ಚರ, ಗಾಢನಿದ್ರೆ–ಇವುಗಳಿಗೆ ಅವಸ್ಥಾತ್ರಯವೆಂದು ಹೆಸರು.

ಪ್ರಶ್ನೆ : ಇವುಗಳ ವಿಷಯಕ್ಕೆ ವಿಚಾರಮಾಡತಕ್ಕದ್ದೇನಿದೆ ?

ಉತ್ತರ : ಎಚ್ಚರವೆಂದರೇನು ? ಇದು ಯಾರಿಗೆ ಆಗುತ್ತದೆ ? ಎಚ್ಚರದಲ್ಲಿ ಆತ್ಮನು ಯಾವಾಗಲೂ ಇರುತ್ತಾನೆಯೆ ? ಎಚ್ಚರದಲ್ಲಿ ತೋರುವ ಆತ್ಮನಲ್ಲದ ವಿಷಯಗಳ ಸ್ವಭಾವವೇನು ? – ಎಂದು ಮುಂತಾಗಿ ವಿಚಾರಮಾಡುವದು ಎಚ್ಚರದ ವಿಚಾರವು. ಕನಸುನಿದ್ರೆಗಳ ವಿಷಯ ದಲ್ಲಿಯೂ ಹೀಗೆಯೇ ಅವಸ್ಥೆ, ಅವಸ್ಥೆಯನ್ನನುಭವಿಸುವ ಆತ್ಮ, ಅದರಲ್ಲಿರ ಬಹುದಾದ ಅನಾತ್ಮ – ಇವುಗಳ ವಿಚಾರವನ್ನು ಮಾಡಬೇಕು.

ಪ್ರಶ್ನೆ : ಕನಸಿನಲ್ಲಿ ತೋರುವದೆಲ್ಲ ಸುಳ್ಳುತೋರಿಕೆಯೆಂದು ಪ್ರಸಿದ್ಧ ವಾಗಿರುತ್ತದೆ : ನಿದ್ರೆಯಲ್ಲಿ ಏನೇನೂ ತೋರುವದೇ ಇಲ್ಲವೆಂಬುದೂ ಗೊತ್ತಾಗಿದೆ. ಹೀಗಿರುವದರಿಂದ ಈ ಎರಡವಸ್ಥೆಗಳನ್ನೂ ಕೈಬಿಟ್ಟು ಎಚ್ಚರ ವೊಂದನ್ನೇ ವಿಚಾರಮಾಡಿದರೆ ಸಾಲದೆ ?

ಉತ್ತರ : ಸಾಲದು. ಏಕೆಂದರೆ ವಿಚಾರಮಾಡದೆ ಯಾವದೊಂದನ್ನೂ ನಂಬುವದಕ್ಕಿಲ್ಲ. ಹೇಗೆಂದರೆ ಯಾವದು ಇರುವಂತೆ ತೋರುವದೋ ಅದು ನಿಜವಾಗಿ ಇಲ್ಲದೆಯೇ ಇರಬಹುದು. ಉದಾಹರಣೆಗೆ ದೂರದಲ್ಲಿ ನೀರಿರುವ ದೆಂದು ತಿಳಿದು ಪ್ರಯಾಣಿಕರು ಎಷ್ಟೋ ಸಲ ಹತ್ತಿರಕ್ಕೆ ಹೋಗಿ ನೋಡಲಾಗಿ ಅಲ್ಲಿ ಏನೂ ಇಲ್ಲದೆ ಬಯಲಾಗಿರುವದುಂಟು. ಹೀಗೆಯೇ ಏನೂ ಇಲ್ಲವೆಂದು ಮೊದಲು ತೋರಿ ಕೊನೆಗೆ ವಿಚಾರದಲ್ಲಿ ಎಷ್ಟೊ ಮಹತ್ತಾದ ವಿಷಯವು ಇದೆ ಎಂದು ಗೊತ್ತಾಗಬಹುದು. ಉದಾಹರಣೆಗೆ ಒಬ್ಬ ಮನುಷ್ಯನು ತನ್ನ ಮನೆ ಯಲ್ಲಿ ಹೆಚ್ಚಾಗಿರುವ ನಿರುಪಯೋಗವಾದ ಕಾಗದಪತ್ರಗಳನ್ನೆಲ್ಲ ಹರಿದುಹಾಕಿ ಸುಟ್ಟುಬಿಡಬೇಕೆಂದು ಪ್ರಯತ್ನಿಸುತ್ತಾನೆ. ಕಾಗದಗಳನ್ನು ಒಂದೊಂದಾಗಿ ಹರಿದುಹಾಕುತ್ತಿರುವಲ್ಲಿ ಆಕಸ್ಮಾತ್ತಾಗಿ ತಮ್ಮ ಮುತ್ತಜ್ಜನಿಗೆ ಯಾರೋ ಒಬ್ಬ ಮಹಾರಾಜನು ವಂಶಪಾರಂಪರ್ಯವಾಗಿ ನಡೆದುಬರುವಂತೆ ಹಾಕಿಕೊಟ್ಟಿದ್ದ ಲಕ್ಷಗಟ್ಟಲೆ ಬೆಲೆಬಾಳುವ ಒಂದು ದೊಡ್ಡ ಉಂಬಳಿಯ ಶಾಸನಪತ್ರವು ಕಣ್ಣಿಗೆ ಬೀಳುತ್ತದೆ. ಹೀಗೆ, ವಿಚಾರಿಸದೆ ಯಾವದನ್ನಾದರೂ ಕೈಬಿಡುವಲ್ಲಿ ಅಥವಾ ಅಭಿಮಾನದಿಂದ ಯಾವದನ್ನಾದರೂ ಪಟ್ಟುಹಿಡಿಯುವಲ್ಲಿ ತುಂಬ ನಷ್ಟವಿರ ಬಹುದು. ಆದ್ದರಿಂದ ಮೂರವಸ್ಥೆಗಳನ್ನೂ ಆಗತ್ಯವಾಗಿ ವಿಚಾರ ಮಾಡಬೇಕು.

ಪ್ರಶ್ನೆ: ಆಗಲಿ. ತಾವು ಅವಸ್ಥೆಗಳನ್ನು ಹೇಳುವಾಗ ಕನಸನ್ನೇ ಮೊದಲು ಹೇಳಿದ್ದು ಏಕೆ ?

ಉತ್ತರ: ಏಕೆಂದರೆ ಕನಸು ಸುಳ್ಳೆಂಬ ಭಾವನೆಯು ಎಲ್ಲರಿಗೂ ಸಹಜವಾಗಿಯೇ ಇರುತ್ತದೆ. ಆದ್ದರಿಂದ ಇದರ ವಿಚಾರವನ್ನು ಬೇಗನೆ ಮುಗಿಸಿಬಿಡಬಹುದು.

ಪ್ರಶ್ನೆ: ನಾವು ಕನಸುಕಾಣುವದೇ ಸುಳ್ಳೆಂತಲೆ ?

ಉತ್ತರ: ಹಾಗಲ್ಲ. ಕನಸಿನಲ್ಲಿ ತೋರುವ ಪದಾರ್ಥಗಳೂ ಕನಸೂ ಎಚ್ಚೆತ್ತಕೂಡಲೇ ಸುಳ್ಳೆಂದು ತೋರುವವು. ಕನಸಿನ ಕಾಲದಲ್ಲಿ ಅವು ನಿಜವೆಂದು ತೋರಿದರೂ ಹಿಂದಿನಿಂದ ಸುಳ್ಳೇ ಆಗುವದರಿಂದ ಕನಸೆಂಬುದು ಭ್ರಮೆಯೆಂದು ಬೇಗ ನಿರ್ಣಯವಾಗುತ್ತದೆ.

ಪ್ರಶ್ನೆ: ಅದು ಭ್ರಮೆಯೆಂದಾದರೆ ವಿಚಾರಕನಿಗೆ ಅದರಿಂದಾಗುವ ಪ್ರಯೋಜನವೇನು ?

ಉತ್ತರ: ಕನಸಿನಲ್ಲಿ ಆತ್ಮನನ್ನು ತೋರಿಸಿಕೊಡುವದಕ್ಕೆ ಯಾವ ನಿಜವಾದ ಮನಸ್ಸೂ ಇರುವದಿಲ್ಲ; ಆದರೆ ಆತ್ಮನು ಮಾತ್ರ ಕನಸನ್ನು ನೋಡುತ್ತಾ ಅಲ್ಲಿಯೂ ಇದ್ದೇ ಇರುತ್ತಾನೆ. ಆದ್ದರಿಂದ ಆತ್ಮನು ಮನಸ್ಸಿನ ಹಂಗಿಲ್ಲದೆ ತೋರುತ್ತಾನೆಂಬುದು ಹಗುರವಾಗಿ ಸಿದ್ಧವಾಗಿಬಿಡುತ್ತದೆ.

ಪ್ರಶ್ನೆ: ಆಗಲಿ. ಈಗ ಎಚ್ಚರವನ್ನು ಕುರಿತು ವಿಚಾರಮಾಡೋಣ. ಎಚ್ಚರವೆಂದರೇನು ?

ಉತ್ತರ: ಹೊರಗಿನ ವಿಷಯಗಳನ್ನು ಇಂದ್ರಿಯಗಳಿಂದ ಅರಿಯುವದೇ ಎಚ್ಚರವು.

ಪ್ರಶ್ನೆ: ಹಾಗಾದರೆ ಕನಸಿನಲ್ಲಿ ವಿಶೇಷವೇನು ?

ಉತ್ತರ: ಇಂದ್ರಿಯಗಳಿಲ್ಲದೆ ಬರಿಯ ಮನಸ್ಸಿಗೆ ವಿಷಯಗಳನ್ನು ಅರಿತಂತೆ ತೋರುವದು.

ಪ್ರಶ್ನೆ: ಕನಸಿನಲ್ಲಿ ಆತ್ಮನನ್ನು ಅರಿಯುವದಕ್ಕೆ ಮನಸ್ಸು ಯಾವದೂ ಇಲ್ಲವೆಂದು ಹಿಂದೆ ಹೇಳಿದಿರಿ. ಈಗ ಇಂದ್ರಿಯಗಳಿಲ್ಲದೆ ಬರಿಯ ಮನಸ್ಸು ಇದೆ ಎಂತ ಹೇಳುವಿರಲ್ಲ ? ಇದು ಪೂರ್ವಾಪರವಿರುದ್ಧವಲ್ಲವೆ ?

**ಉತ್ತರ :** ಕನಸಿನಲ್ಲಿ ಯಾವ ನಿಜವಾದ ಮನಸ್ಸೂ ಇರುವದಿಲ್ಲವೆಂದು ನಾನು ಮೊದಲು ಹೇಳಿದ್ದು ನಿಜ. ಆದರೆ ಎಚ್ಚರದ ಮನಸ್ಸಿನ ವಾಸನೆಯಿಂದ ಅಲ್ಲಿ ಎಲ್ಲಾ ವಿಷಯಗಳೂ ತೋರುತ್ತಿರುವದರಿಂದ ಅಲ್ಲಿ ಮನಸ್ಸು ಇದೆಯೆಂದು ಇಟ್ಟುಕೊಂಡರೂ ಬಾಧಕವಿಲ್ಲ. ಮನಸ್ಸೇ ವಿಷಯಗಳಾಗಿ ತೋರುವದರಿಂದ ಮನಸ್ಸನ್ನು ಆತ್ಮನು ಬೆಳಗುತ್ತಾನೆಂದೇ ಸಿದ್ಧವಾಗುತ್ತದೆ.

**ಪ್ರಶ್ನೆ :** ಕನಸಿನಲ್ಲಿಯೂ ದೇಹೇಂದ್ರಿಯಗಳು ಇರುವವಲ್ಲವೆ ?

**ಉತ್ತರ :** ಎಚ್ಚರದ ದೇಹವಾಗಲಿ ಇಂದ್ರಿಯಗಳಾಗಲಿ ಕನಸಿನಲ್ಲಿರುವದಿಲ್ಲ. ಅದೇ ದೇಹೇಂದ್ರಿಯಗಳು ಎರಡವಸ್ಥೆಗಳಲ್ಲಿಯೂ ಇರುತ್ತಿದ್ದರೆ ಕನಸಿನಲ್ಲಿ ಮೈಗೆ ಬಳಿದುಕೊಂಡ ಗಂಧದ ವಾಸನೆಯು ಎಚ್ಚರದ ದೇಹದಲ್ಲಿಯೂ ಕಾಣಬೇಕಾಗುವದು. ಇದೂ ಅಲ್ಲದೆ ಕನಸಿನಲ್ಲಿ ತೋರುವ ವಿಷಯಗಳಂತೆಯೇ ಅಲ್ಲಿ ತೋರುವ ದೇಹೇಂದ್ರಿಯಗಳು ಕೂಡ ಸುಳ್ಳೆಂಬುದು* ಎಚ್ಚತ್ತಮೇಲೆ ಎಲ್ಲರಿಗೂ ಅನುಭವಕ್ಕೆ ಬರುವ ವಿಷಯವಾಗಿದೆ.

**ಪ್ರಶ್ನೆ :** ಒಳ್ಳೆಯದು. ಎಚ್ಚರವೆಂಬುದು ಯಾರಿಗೆ ಆಗುತ್ತದೆ ?

**ಉತ್ತರ :** ಅದನ್ನು ಅನುಭವಿಸುವವರಿಗೆ ಆಗುತ್ತದೆ.

**ಪ್ರಶ್ನೆ :** ಎಲ್ಲರೂ ಎಚ್ಚರವನ್ನು ಅನುಭವಿಸುತ್ತಾರಲ್ಲವೆ ?

**ಉತ್ತರ :** ಸರಿ. ಹಾಗಾದರೆ ಎಲ್ಲರಿಗೂ ಎಚ್ಚರವಾಗುತ್ತದೆಯೆಂದೇ ಆಯಿತು.

**ಪ್ರಶ್ನೆ :** ಇದರಿಂದ ಏನೂ ನಿರ್ಣಯವಾದಂತಾಗಲಿಲ್ಲವಲ್ಲ ! ಈ ವಿಚಾರದಿಂದ ತಿಳಿಯಬೇಕಾದದ್ದೇನು ?

---

* ಇಲ್ಲಿ ಕನಸು, ಎಚ್ಚರ– ಇವುಗಳಿಗೆ ಭೇದವಿದೆಯೆಂದೂ ಎಚ್ಚರದ ವಾಸನೆಯಿಂದಲೇ ಕನಸು ಆಗುವದೆಂದೂ ಒಪ್ಪಿಕೊಂಡೇ ವಿಚಾರಮಾಡಿರುತ್ತದೆ. ಬಹುಜನರಿಗೆ ಈ ಭೇದವು ನಿಜವೆಂದೇ ತೋರುವದರಿಂದ ಈ ವಿಚಾರಸರಣಿಯು ಬೇಗ ಮನಸ್ಸಿಗೆ ಹಿಡಿಯುತ್ತದೆ. ಆದರೆ ನಿಜವಾಗಿ ಕನಸಿಗೂ ಎಚ್ಚರಕ್ಕೂ ಯಾವ ಭೇದವೂ ಇರುವದಿಲ್ಲವೆಂಬ ಉತ್ತಮಸಿದ್ಧಾಂತವನ್ನು ಶ್ರೀ ಗೌಡಪಾದರವರು ತಮ್ಮ 'ವೈತಥ್ಯಪ್ರಕರಣ'ದಲ್ಲಿ ಪ್ರತಿಪಾದಿಸಿರುತ್ತಾರೆ. 'ವೇದಾಂತಪ್ರವೇಶಿಕೆ' ಎಂಬ ಗ್ರಂಥದಲ್ಲಿಯೂ ಇದನ್ನು ವಿಶದಗೊಳಿಸಿದೆ. 'ಪರಮಾರ್ಥಚಿಂತಾಮಣಿ'ಯಲ್ಲಿ ಅವಸ್ಥಾತ್ರಯಪ್ರಕ್ರಿಯೆಯನ್ನು ವಿಸ್ತಾರವಾಗಿ ತಿಳಿಗನ್ನಡದಲ್ಲಿ ವಿವರಿಸಿರುತ್ತದೆ.

ಉತ್ತರ : ನಿಜ. ಇಂಥ ವಿಚಾರದಿಂದ ಏನೂ ನಿರ್ಣಯವಾಗಲಾರದು. ಎಚ್ಚರವು ಯಾರಿಗೆ ಆಗುತ್ತದೆ ?–ಎಂಬುದನ್ನು ನಿರ್ಣಯಿಸುವದಕ್ಕೆ ಹೊರಟು ಅದು ಎಲ್ಲರಿಗೂ ಆಗುತ್ತದೆಯೆಂದು ಮೊದಲೇ ಇಟ್ಟುಕೊಂಡುಬಿಟ್ಟರೆ ಹೇಗೆತಾನೆ ನಿರ್ಣಯವಾದೀತು ?

ಪ್ರಶ್ನೆ : ತಾವೂ ಹಾಗೆಯೇ ಹೇಳಿದಿರಿ. ಯಾರು ಅನುಭವಿಸುತ್ತಾರೆಯೋ ಅವರಿಗೇ ಎಚ್ಚರವಾಗುವದೆಂದಲ್ಲವೆ, ತಾವು ಹೇಳಿದ್ದು ?

ಉತ್ತರ : ಹೌದು. ಆದರೆ ಕನಸನ್ನು ಅನುಭವಿಸುತ್ತಿರುವವರಿಗೆಲ್ಲ ಎಚ್ಚರವಾಗುವದೆಂದು ನಾನು ಹೇಳಲಿಲ್ಲ.

ಪ್ರಶ್ನೆ : ನನ್ನ ಅಭಿಪ್ರಾಯವೂ ಅಷ್ಟೇ. ಆದರೆ ಯಾರುಯಾರಿಗೆ ಕನಸಾಗುವದೋ ಅವರವರಿಗೆ ಕನಸು ಮುಗಿದಮೇಲೆ ಎಚ್ಚರವಾಗಿಯೇ ತೀರುತ್ತದೆಯಲ್ಲವೆ ?

ಉತ್ತರ : ಸರಿಯೆ ; ಕನಸಿನಲ್ಲಿ ನಮಗೆ ತೋರುವವರೆಲ್ಲ ಕನಸನ್ನು ಅನುಭವಿಸುವದಿಲ್ಲವಷ್ಟೆ ?

ಪ್ರಶ್ನೆ : ಇಲ್ಲ. ಅದಮಾತ್ರಕ್ಕೆ ಏನು ?

ಉತ್ತರ : ಹೇಗೆ ಕನಸಿನಲ್ಲಿ ನಮಗೆ ತೋರುವವರೆಲ್ಲ ನಮ್ಮ ಕನಸಿಗೇ ಸೇರಿದವರೋ, ಹೇಗೆ ನಮ್ಮ ಕನಸನ್ನು ಬಿಟ್ಟು ಅವರು ನಿಜವಾಗಿ ಬೇರೆ ಇಲ್ಲವೋ, ಹಾಗೆಯೇ ಎಚ್ಚರದಲ್ಲಿ ನಮಗೆ ತೋರುವವರೆಲ್ಲರೂ ನಮ್ಮ ಎಚ್ಚರಕ್ಕೇ ಸೇರಿದವರು. ಹೇಗೆ ನಮ್ಮ ಕನಸಿನಲ್ಲಿ ಕಾಣುವವರೆಲ್ಲ ಆ ಕನಸನ್ನು ಅನುಭವಿಸುತ್ತಾರೆಂದು ಹೇಳುವದು ಯುಕ್ತವಲ್ಲವೋ ಹಾಗೆಯೇ ನಮ್ಮ ಎಚ್ಚರದಲ್ಲಿ ಕಾಣುವವರೆಲ್ಲ ಆ ಎಚ್ಚರವನ್ನು ಅನುಭವಿಸುತ್ತಾರೆಂದು ಹೇಳುವದೂ ಯುಕ್ತವಲ್ಲ. ಆದ್ದರಿಂದಲೇ ಯಾರು ಎಚ್ಚರವನ್ನು ಅನುಭವಿಸುವರೋ ಅವರಿಗೆ ಮಾತ್ರ ಎಚ್ಚರವಾಗಿರುವದೆಂದು ನಾವು ಮೊದಲು ಹೇಳಿದ್ದು.

ಪ್ರಶ್ನೆ : ಹಾಗಾದರೆ ನಮಗೆ ಕಾಣುವವರೆಲ್ಲರೂ ಎಚ್ಚರವಾಗಿಲ್ಲವೇನು ?

ಉತ್ತರ : ನಮಗೆ ಕನಸಿನಲ್ಲಿ ಕಾಣುತ್ತಿರುವವರೆಲ್ಲರೂ ಕನಸನ್ನು ಅನುಭವಿಸುತ್ತಿರುವರೆ ?

ಪ್ರಶ್ನೆ : ಸರಿ ಸರಿ. ನನ್ನ ಕನಸಿನಲ್ಲಿ ಹೇಗೆ ಅನೇಕರು ಆ ಕನಸನ್ನು ಅನುಭವಿಸುವಂತೆ ತೋರುವದೋ ಹಾಗೆಯೇ ನನ್ನ ಎಚ್ಚರದಲ್ಲಿಯೂ ಇನ್ನೂ ಅನೇಕರು ಎಚ್ಚರವನ್ನು ಅನುಭವಿಸುತ್ತಿರುವಂತೆ ತೋರುವದೆಂದಾಯಿತು. ಹಾಗಾದರೆ ನಿಜವಾಗಿ ಎಚ್ಚರವನ್ನು ಅನುಭವಿಸುವವರು ಯಾರು ?

ಉತ್ತರ : ಯಾರು ಅನುಭವಿಸುವೆವೆಂದು ತಿಳಿದುಕೊಂಡಿರುವರೋ ಅವರೇ.

ಪ್ರಶ್ನೆ : ಎಲ್ಲರೂ ಹಾಗೆಯೇ ತಿಳಿದುಕೊಂಡಿರುತ್ತಾರಲ್ಲವೆ ?

ಉತ್ತರ : ಹಾಗಲ್ಲ. ಅವರೆಲ್ಲರೂ ಹಾಗೆಯೇ ತಿಳಿದುಕೊಂಡಿರುತ್ತಾರೆಂಬುದೂ ನಿನಗೆ ನಿನ್ನ ಎಚ್ಚರದಲ್ಲಿಯೇ ತೋರುವದಾದ್ದರಿಂದ ಮತ್ತೊಬ್ಬರು ಎಚ್ಚರವನ್ನು ಅನುಭವಿಸುತ್ತಿದಾರೆಂದು ಹೇಳುವದಕ್ಕೆ ನಿನಗೆ ಅವಕಾಶವಿಲ್ಲ.

ಪ್ರಶ್ನೆ : ಅದು ಹೇಗೆ ಅವಕಾಶವಿಲ್ಲ ?

ಉತ್ತರ : ಏಕೆಂದರೆ, ನಿನಗೆ ತೋರುವದೆಲ್ಲ ನಿನ್ನ ಎಚ್ಚರ. ನಿನ್ನ ಎಚ್ಚರಕ್ಕಿಂತ ಬೇರೆಯಾದ ಮತ್ತೊಂದು ಎಚ್ಚರವಾಗಲಿ ಅದನ್ನು ಅನುಭವಿಸುವವರಾಗಲಿ ನಿನಗೆ ತೋರಿಲ್ಲ. ಹಾಗೆ ತೋರಿದೆಯೆಂದರೂ ಅದೂ ನಿನಗೇ ತೋರುವದರಿಂದ ಅದೂ ನಿನ್ನ ಎಚ್ಚರವೇ ಆಗುವದು.

ಪ್ರಶ್ನೆ : ಒಳ್ಳೆಯದು. ಎಚ್ಚರವು ನನಗೇ ಆಗುತ್ತದೆಯೆಂದಿಟ್ಟುಕೊಳ್ಳೋಣ. ಈ ಎಚ್ಚರದಲ್ಲಿ ನನ್ನ ಆತ್ಮನು ಯಾವಾಗಲೂ ಇರುತ್ತಾನೆಯೊ ?

ಉತ್ತರ : ನಿನ್ನ ಆತ್ಮನ ಸ್ವರೂಪವನ್ನು ತಿಳಿದು ಈ ಪ್ರಶ್ನೆಯನ್ನು ಮಾಡಿದ್ದೀಯೊ, ಹೇಗೆ ?

ಪ್ರಶ್ನೆ : ನನಗೇನೂ ತಿಳಿಯದು. ಆದ್ದರಿಂದಲೇ ಅಲ್ಲವೆ, ಆತ್ಮನು ಮನಸ್ಸಿನಲ್ಲಿ ಹೇಗೆ ಬೆಳಗುತ್ತಾನೆ ಎಂದು ನಾನು ಕೇಳಿದ್ದು ?

ಉತ್ತರ : ಹಾಗಾದರೆ ಸರಿ. ಹೇಳುತ್ತೇನೆ ಕೇಳು ; ದೇಹ, ಇಂದ್ರಿಯ–ಮೊದಲಾದವುಗಳೆಲ್ಲ ಒಂದಕ್ಕೊಂದು ಕೂಡಿಕೊಂಡಿರುವವಷ್ಟೆ ? ಹೇಗೆ ಅನೇಕಪದಾರ್ಥಗಳು ಒಂದಕ್ಕೊಂದು ಸೇರಿಕೊಂಡು ಮನೆಯೆನಿಸಿ

ಕೊಂಡು ಆ ಮನೆಯನ್ನು ಕಟ್ಟಿದವನಿಗಾಗಿ ಇದ್ದುಕೊಂಡಿರುವವೊ ಅವರಂತೆಯೇ ಈ ದೇಹೇಂದ್ರಿಯಾದಿಗಳೂ ತಮಗಿಂತ ಬೇರೆಯಾದ ಯಾರೋ ಒಬ್ಬನ ಪ್ರಯೋಜನಕ್ಕಾಗಿ ಇರುವವೆಂದು ಊಹಿಸಬಹುದಾಗಿದೆ. ಇದರಂತೆ ಮನಸ್ಸಿನಲ್ಲಿರುವ ಆಶೆ, ಸಿಟ್ಟು– ಮುಂತಾದವುಗಳು ಒಂದಕ್ಕೊಂದು ಹೊಂದಿಕೊಂಡಿರುವದರಿಂದ ತಮಗಿಂತ ಬೇರೆಯಾದ ಯಾರೋ ಒಬ್ಬನ ಪ್ರಯೋಜನಕ್ಕಾಗಿಯೇ ಇರುವವೆಂದು ಗೊತ್ತಾಗುತ್ತದೆ. ಹೀಗೆ ಇವೆಲ್ಲ ಯಾರಿಗಾಗಿರುವವೋ **ಅವನೇ ಆತ್ಮನು.**

## ಆತ್ಮನು ಸತ್ಯಜ್ಞಾನಾನಂದಸ್ವರೂಪನು
( ಸಚ್ಚಿತ್ಸುಖಿವರ್ )

ಪ್ರಶ್ನೆ : ಹೀಗೆ ಯಾವದೋ ಒಂದು ವಸ್ತು ಆತ್ಮನೆಂದಾದರೆ ಅದರ ಸ್ವರೂಪವೇನು ಗೊತ್ತಾದಂತಾಯಿತು ?

ಉತ್ತರ : ಇದು ಯಾವದೋ ಒಂದು ವಸ್ತುವಲ್ಲ, ನಮ್ಮ ಸ್ವರೂಪವೇ ಆಗಿದೆ. ಆತ್ಮನೆಂಬುದು ನಮ್ಮ ಸ್ವರೂಪಕ್ಕಿಂತ ಬೇರೆಯಾಗಿಲ್ಲವಾದ್ದರಿಂದ ಆತ್ಮನೆಂಬುದು ಯಾವದೋ ಒಂದು ಅಪ್ರಸಿದ್ಧತತ್ತ್ವವೆನ್ನುವ ಹಾಗಿಲ್ಲ. ಇದೂ ಅಲ್ಲದೆ ಈ ಆತ್ಮನು ಸಚ್ಚಿತ್ಸುಖರೂಪನಾಗಿ ನಮ್ಮಲ್ಲಿ ಕಂಡುಬರುತ್ತಿರುವದರಿಂದ ಅತ್ಯಂತಪ್ರಸಿದ್ಧನೇ ಆಗಿರುತ್ತಾನೆ.

ಪ್ರಶ್ನೆ : ಸಚ್ಚಿತ್ಸುಖರೂಪವೆಂದರೇನು ?

ಉತ್ತರ : ಸತ್ತೆಂದರೆ ಯಾವಾಗಲೂ ಇರುವದು ; ಇರವಿನ ಸ್ವರೂಪವೇ ಆತ್ಮನು. ಚಿತ್ತೆಂದರೆ ಜ್ಞಾನವು ; ಆತ್ಮನು ಜ್ಞಾನಸ್ವರೂಪನೂ ಆಗಿರುತ್ತಾನೆ. ಸುಖವೆಂದರೆ ಆನಂದವು ; ಆತ್ಮನು ಆನಂದಸ್ವರೂಪನೂ ಆಗಿರುತ್ತಾನೆ.

ಪ್ರಶ್ನೆ ; ನಮ್ಮಲ್ಲಿ ಇರವು, ಜ್ಞಾನ, ಆನಂದ– ಎಂಬ ಮೂರು ರೂಪಗಳು ಎಲ್ಲಿ ಕಾಣುತ್ತವೆ ? ಹಾಗಾದರೆ ನಾವು ಒಬ್ಬೊಬ್ಬರೂ ಮೂರು ಮೂರು ಮಂದಿಯೆಂದು ತೋರಬೇಕಾಗುವದಲ್ಲವೆ ?

ಉತ್ತರ : ಇಲ್ಲ. ಏಕೆಂದರೆ ಸತ್ಯವೆಂಬುದು ಒಂದು, ಜ್ಞಾನವೆಂಬುದು ಒಂದು, ಆನಂದವೆಂಬುದು ಒಂದು – ಎಂದು ನಮ್ಮಲ್ಲಿ ಮೂರು

ಮೂರು ಅಂಶಗಳಿಲ್ಲ ; ನಮ್ಮ ಒಂದೇ ಸ್ವರೂಪವೇ ಒಂದು ದೃಷ್ಟಿಯಿಂದ ಸತ್ಯವಾಗಿಯೂ ಮತ್ತೊಂದು ದೃಷ್ಟಿಯಿಂದ ಜ್ಞಾನವಾಗಿಯೂ ಇನ್ನೊಂದು ದೃಷ್ಟಿಯಿಂದ ಆನಂದಸ್ವರೂಪವಾಗಿಯೂ ತೋರುತ್ತಿದೆ. ಆತ್ಮನು ಯಾವಾಗಲೂ ಇರುತ್ತಾನೆ; ಆದ್ದರಿಂದ ಸತ್ಯಸ್ವರೂಪನು. ಯಾವಾಗಲೂ ಎಲ್ಲವನ್ನೂ ಅರಿಯುತ್ತಾನೆ; ಆದ್ದರಿಂದ ಜ್ಞಾನಸ್ವರೂಪನು. ಎಲ್ಲಕ್ಕಿಂತಲೂ ಹೆಚ್ಚಿನ ಪ್ರೇಮಕ್ಕೆ ವಿಷಯನಾಗಿರುತ್ತಾನೆ ; ಆದ್ದರಿಂದ ಆನಂದಸ್ವರೂಪನು.

ಪ್ರಶ್ನೆ : ಇದಿರಲಿ. ಸತ್ಯವೆಂದರೆ ಯಾವಾಗಲೂ ಇರುವದೆಂದಿರಷ್ಟೆ. ಆತ್ಮನು ಯಾವಾಗಲೂ ಇರುತ್ತಾನೆಂಬುದು ಹೇಗೆ ?

ಉತ್ತರ : ಈ ಆತ್ಮನು ಯಾವಾಗಲೂ ಜ್ಞಾನರೂಪದಿಂದ ತೋರುತ್ತಲೇ ಇರುತ್ತಾನೆ. ಆದ್ದರಿಂದಲೇ ಸತ್ಯಸ್ವರೂಪನು.

ಪ್ರಶ್ನೆ : ಜ್ಞಾನವೆಂದರೆ ತಿಳಿಯುವ ಕ್ರಿಯೆ ಅಲ್ಲವೆ ? ಇದು ಮನಸ್ಸಿನ ಕೆಲಸವು. ಹೀಗಿರುವಲ್ಲಿ ಅದನ್ನು ಆತ್ಮನ ಸ್ವರೂಪವೆಂದು ಹೇಳುವದು ಹೇಗೆ ?

ಉತ್ತರ : ಎಚ್ಚರದಲ್ಲಿ ನಮಗೆ ತೋರುವ ವಿಷಯಗಳು ತಮಗೆ ತಾವೇ ತೋರುವಹಾಗಿಲ್ಲ, ಏಕೆಂದರೆ ಮನಸ್ಸಿನ ಸಂಬಂಧದಿಂದಲೇ ಅವು ತೋರುತ್ತವೆ. ಆದ್ದರಿಂದ ವಿಷಯಗಳು ತೋರುವದಕ್ಕೆ ಕಾರಣವಾಗಿ ಯಾವದೋ ಒಂದು ಇರಬೇಕೆಂದಾಯಿತಷ್ಟೆ. ಮನಸ್ಸಿನ ಒಂದಾನೊಂದು ಧರ್ಮದಿಂದಲೇ ಅವು ತೋರುತ್ತವೆ ಎಂದು ಹೇಳುವದಕ್ಕೂ ಬರುವದಿಲ್ಲ. ಏಕೆಂದರೆ ಮನಸ್ಸಿಗೂ ಬೇರೆಬೇರೆ ರೂಪಗಳಿವೆ ; ಅವು ನಮಗೆ ತೋರುವದಕ್ಕೂ ಕಾರಣವಾದ ಮತ್ತೊಂದು ಬೆಳಕು ಬೇಕಾಗಿರುತ್ತದೆ. ಈ ಕಾರಣವೇ ಆತ್ಮನು.

ಪ್ರಶ್ನೆ : ಇದು ಸರಿಯೆಂತ ತೋರುವದಿಲ್ಲ. ಏಕೆಂದರೆ ಮನಸ್ಸನ್ನು ಬಿಟ್ಟರೆ ಮಿಕ್ಕ ಪದಾರ್ಥಗಳಿಗೆ ತಾವೇ ಬೆಳಗುವ ಸ್ವಭಾವವಿರುವದಿಲ್ಲವಾದ್ದರಿಂದ ಅವನ್ನು ಮನಸ್ಸು ಬೆಳಗಬೇಕಾಗಿರುತ್ತದೆ ; ಆದರೆ ಮನಸ್ಸು ನಿರ್ಮಲವಾದ ವಸ್ತು, ಅದು ಎಲ್ಲವನ್ನೂ ಅರಿಯಬಲ್ಲದ್ದೆಂದು ಪ್ರಸಿದ್ಧವೂ ಆಗಿರುತ್ತದೆ. ಅದನ್ನು ಅರಿಯುವದಕ್ಕೆ ಮತ್ತೊಂದರ ಸಹಾಯವು ಏತಕ್ಕೆ ಬೇಕು ? ಈ

ವಿಷಯದಲ್ಲಿ ದೀಪದ ದೃಷ್ಟಾಂತವನ್ನು ತಾವೇ ಹೇಳಿದ್ದೀರಿ.* ದೀಪದಂತಿರುವ ಮನಸ್ಸನ್ನು ಅರಿಯುವದಕ್ಕೆ ಮತ್ತೊಂದರ ಬೆಳಕು ಏತಕ್ಕೆ ಬೇಕು ?

ಉತ್ತರ : ಹಾಗಾದರೆ ಕಣ್ಣು, ಮೂಗು ಮುಂತಾದವುಗಳೂ ತಮಗಿಂತ ಬೇರೆಯಾಗಿರುವ ವಿಷಯಗಳನ್ನು ಅರಿಯುವ ಸ್ವಭಾವವುಳ್ಳವುಗಳಾಗಿರುವದರಿಂದ ಕಣ್ಣು ಕಣ್ಣನ್ನು ಮೂಗು ಮೂಗನ್ನೂ ಅರಿಯಬಹುದೆಂದಾಗುತ್ತದೆ. ಅಥವಾ ಕಣ್ಣು ಕಿವಿಯನ್ನಾಗಲಿ ಮೂಗು ಕಣ್ಣನ್ನಾಗಲಿ ಅರಿಯಬಹುದೆಂದಾಗುತ್ತದೆ. ಆದರೆ ಹಾಗೆ ಎಲ್ಲಿಯೂ ಇಲ್ಲವಲ್ಲ !

ಪ್ರಶ್ನೆ : ಈ ಆಕ್ಷೇಪವು ಆತ್ಮನಿಗೂ ಅಂಟುತ್ತದೆಯಲ್ಲವೆ ? ಆತ್ಮನಿಗೆ ಅರಿಯುವ ಸ್ವಭಾವವಿದೆಯೆಂದರೂ ಅವನು ತನ್ನನ್ನು ತಾನೇ ಅರಿಯುವನೆಂಬುದು ಹೇಗೆ ಆದೀತು ? ಆತ್ಮನನ್ನು ಅರಿಯುವದಕ್ಕೆ ಮತ್ತೊಂದನ್ನು ಒಪ್ಪಿದರೆ, ಅದನ್ನರಿಯುವದಕ್ಕೆ ಮತ್ತೊಂದು ಬೇಕಾಗುವದು ; ಆಮೇಲೆ ಅವನ್ನರಿಯುವದಕ್ಕೂ ಬೇರೊಂದು ಬೇಕೆಂದಾಗುವದು. ಹೀಗಾದರೆ ನಿಲುಗಡೆ ಎಲ್ಲಿಸುತ್ತದೆ ?

ಉತ್ತರ : ಹಾಗಾಗಲಾರದು. ಕಣ್ಣು, ಕಿವಿ- ಮುಂತಾದವುಗಳು ಅನೇಕವಾಗಿದ್ದು ಅವುಗಳು ಒಂದಕ್ಕೊಂದು ಸೇರಿಕೊಂಡು ತಮಗಿಂತ ಬೇರೆಯಾದ ಮನಸ್ಸಿಗೆ ಪ್ರಯೋಜನವನ್ನುಂಟುಮಾಡುತ್ತಿರುವವು. ಇದರಂತೆಯೇ ಮನಸ್ಸಿನಲ್ಲಿರುವ ಬೇರೆಬೇರೆಯ ವಿಷಯಾಕಾರವಾದ ರೂಪಭೇದಗಳೂ ಅನೇಕವಾಗಿದ್ದು ಒಂದಕ್ಕೊಂದು ಸೇರಿಕೊಂಡು ಆತ್ಮನ ಪ್ರಯೋಜನಕ್ಕಾಗಿರುವವು. ಆದರೆ ಆತ್ಮನು ಒಂದಕ್ಕಿಂತ ಹೆಚ್ಚಾಗಿಲ್ಲ, ಇನ್ನಾವದರೊಡನೆಯೂ ಸೇರಿಕೊಂಡಿರುವದಿಲ್ಲ : ಕಣ್ಣು, ಮೂಗು-ಮುಂತಾದವುಗಳು ಒಂದೊಂದು ವಿಷಯವನ್ನು ಒಂದೊಂದು ಅರಿಯುತ್ತಿದ್ದು ಮಿಕ್ಕದ್ದನ್ನು ಅರಿಯದಿರುವಂತೆ ಆತ್ಮನು ಅರಿಯದೆ ಇರುವದು ಯಾವದೂ ಇರುವದಿಲ್ಲ. ಮನಸ್ಸು ಎಲ್ಲವನ್ನೂ ಅರಿತರೂ ಅದೂ ತನ್ನ ವಿಷಯಗಳನ್ನು ಒಂದೊಂದಾಗಿಯೇ ಅರಿಯುತ್ತದೆಯೇ ಹೊರತು ಒಂದೇ ಕಾಲಕ್ಕೆ ಎಲ್ಲವನ್ನೂ ಅರಿಯುವದಿಲ್ಲ ; ಅದು ಅನೇಕ ವೃತ್ತಿಗಳ ಆಕಾರವನ್ನು ತಳೆಯುತ್ತಲೂ ಇರುವದು. ಆದು ಮಿಕ್ಕದ್ದೆಲ್ಲವನ್ನೂ

* ೩ನೆಯ ಪುಟದಲ್ಲಿ ಆತ್ಮನ ವಿಷಯಕ್ಕೆ ಈ ದೃಷ್ಟಾಂತವನ್ನು ಕೊಟ್ಟಿರುತ್ತಾರೆ.

ಅರಿತರೂ ಆತ್ಮನನ್ನು ಅರಿಯಲಾರದು. ಇದೂ ಅಲ್ಲದೆ ಮನಸ್ಸು ಎಲ್ಲವನ್ನೂ ಅರಿಯುತ್ತದೆ ಎನ್ನುವಾಗಲೂ ಆತ್ಮನೇ ಮನಸ್ಸಿನ ಮೂಲಕವಾಗಿ ಎಲ್ಲವನ್ನೂ ಅರಿಯುತ್ತಿರುವನು. ಕನ್ನಡಕದ ಸಹಾಯದಿಂದ ಪದಾರ್ಥವನ್ನು ನೋಡುವವನಿಗೆ ,ಸ್ವಭಾವದಿಂದಲೇ ನೋಡುವ ಶಕ್ತಿಯಿರುತ್ತದೆ; ಕನ್ನಡಕಕ್ಕೆ ನೋಡುವ ಶಕ್ತಿ ಎಂದಿಗೂ ಇರುವದಿಲ್ಲ. ಇದರಂತೆ ಮನಸ್ಸಿಗೆ ಅರಿಯುವ ಶಕ್ತಿ ನಿಜವಾಗಿ ಇರುವದೇ ಇಲ್ಲ. ಅದರ ಮೂಲಕವಾಗಿ ಆತ್ಮನೇ ಅರಿಯುತ್ತಿರುವದರಿಂದ ಅರಿಯುವ ಸ್ವಭಾವವೆಂಬುದು ಆತ್ಮನದೇ ಆಯಿತು.

ಪ್ರಶ್ನೆ : ಹಾಗಾದರೆ ಮನಸ್ಸು ಇಂಥಿಂಥದ್ದನ್ನು ಅರಿಯಿತು– ಎಂಬ ಅನುಭವ ಇದೆಯಲ್ಲ ! ಇದಕ್ಕೇನು ಗತಿ ?

ಉತ್ತರ : ಮನಸ್ಸು ಇಂದ್ರಿಯಗಳ ಮೂಲಕವಾಗಿ ಆಯಾ ವಿಷಯಗಳ ಆಕಾರವಾಗುತ್ತದೆ. ಈ ಆಕಾರಗಳಿಗೆ ವೃತ್ತಿಗಳು ಅಥವಾ ಪ್ರತ್ಯಯಗಳು ಎಂದು ಹೆಸರು. ಆಯಾ ಪ್ರತ್ಯಯದ ಮೂಲಕವಾಗಿ ಆತ್ಮನು ಆಯಾ ವಸ್ತುಗಳನ್ನು ಅರಿಯುವನು- ಹೀಗೆ ಮನಸ್ಸಿನ ಬೇರೆಬೇರೆ ಪ್ರತ್ಯಯಗಳು ಹುಟ್ಟಿಹೋಗುತ್ತಿದ್ದರೂ ಆತ್ಮನು ಅರಿವೆಂಬ ಜ್ಞಾನಸ್ವರೂಪವನ್ನು ಬಿಡದೆ ಇರುತ್ತಿರುವನು. ಆದ್ದರಿಂದಲೇ "ಆಗ ಅದನ್ನು ಅರಿತೆನು, ಈಗ ಇದನ್ನು ಅರಿಯುತ್ತಿದೇನೆ" ಎಂಬ ವ್ಯವಹಾರವುಂಟಾಗುವದು ಸಾಧ್ಯವಾಗುತ್ತದೆ. ಪ್ರತ್ಯಯಗಳೇ ಅರಿಯುತ್ತಿದ್ದರೆ ಅವುಗಳು ಬೇರೆಬೇರೆಯಾಗಿರುವದರಿಂದ "ನಾನೇ ಹಿಂದೆ ಅರಿತೆನು, ಆ ನಾನೇ ಈಗ ಅರಿಯುತ್ತೇನೆ, ಮುಂದೆ ಅರಿಯುವೆನು"– ಎಂಬ ಅನುಭವವು ವ್ಯವಹಾರದಲ್ಲಿ ತೋರುವದು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ 'ಇದನ್ನು ನಾನು ಅರಿಯುತ್ತೇನೆ' ಎಂಬಲ್ಲಿ ಅರಿಯೋಣವೆಂಬ ಕೆಲಸವು ಮನಸ್ಸಿನದು ; ಆ ಕೆಲಸವು ಯಾವದೆಂದರೆ ಆಯಾ ವಿಷಯದ ಆಕಾರದಲ್ಲಿ ಪ್ರತ್ಯಯವುಂಟಾಗುವದೇ. ಜ್ಞಾನವು ಅಥವಾ ನಿಜವಾದ ಅರಿವು ಆತ್ಮನ ಸ್ವರೂಪವು ; ಅದು ಯಾವಾಗಲೂ ಒಂದೇ ಆಗಿರುವದೇ ಹೊರತು ಪ್ರತ್ಯಯಗಳಂತೆ ಬೇರೆಬೇರೆಯಾಗುವದಿಲ್ಲ. ಬೇರೆ ಬೇರೆಯ ಬಣ್ಣದ ಕನ್ನಡಕಗಳನ್ನು ಹಾಕಿಕೊಳ್ಳುವವರಿಗೆ ವಸ್ತುಗಳು ಬೇರೆ ಬೇರೆಯ ಬಣ್ಣದವಾಗಿ ಕಾಣುವವಷ್ಟೆ ; ಆಗ ವಸ್ತುಗಳಲ್ಲಿ ಬಣ್ಣವನ್ನು

ತೋರಿಸುವದು ಕನ್ನಡಕದ ಕೆಲಸ, ನೋಡುವದೆಂಬುದು ಮಾತ್ರ ಕಣ್ಣಿನದೇ. ಇದರಂತೆಯೇ ಪ್ರತ್ಯಯಗಳು ಮನಸ್ಸಿನ ವಿಕಾರಗಳಾದರೂ ಅರಿವು ಮಾತ್ರ ಆತ್ಮನ ಸ್ವಭಾವವೇ.

ಪ್ರಶ್ನೆ : ಸರಿ. ಇಲ್ಲಿಯವರೆಗಿನ ವಿಚಾರದಿಂದ ಏನು ನಿರ್ಣಯ ವಾದಂತಾಯಿತು ?

ಉತ್ತರ : ಆತ್ಮನು ಎಚ್ಚರದಲ್ಲಿ ತನ್ನ ಮನಸ್ಸಿಗೆ ಯಾವಯಾವ ವಿಕಾರಗಳು ಉಂಟಾಗುತ್ತಿದ್ದರೂ ಜ್ಞಾನ ಎಂಬ ತನ್ನ ಸ್ವರೂಪದಿಂದಲೇ ಯಾವಾಗಲೂ ಇರುತ್ತಿರುವನೆಂದು ಸಿದ್ಧವಾಯಿತು. ಆತ್ಮನು ಸತ್ಯನೂ ಜ್ಞಾನಸ್ವರೂಪನೂ ಎಂದು ಹೇಳಿದ್ದು ಯುಕ್ತವೆಂದಾಯಿತು.

ಪ್ರಶ್ನೆ : ಆಗಲಿ. ಆತ್ಮನು ಆನಂದರೂಪನೆಂಬುದು ಹೇಗೆ ?

ಉತ್ತರ : ಲೋಕದಲ್ಲಿ ಎಲ್ಲರ ವ್ಯವಹಾರವೂ ಇದಕ್ಕೆ ಸಾಧಕವಾಗಿದೆ. ಹೇಗೆಂದರೆ ಹೆಂಡಿರುಮಕ್ಕಳು, ಹಣಕಾಸು, ಹೊಲಮನೆ – ಮುಂತಾದ ಹೊರಗಿನ ಯಾವ ಪದಾರ್ಥಗಳನ್ನು ಜನರು ಬಯಸಿದರೂ ಅದೆಲ್ಲವನ್ನೂ ತಮಗಾಗಿಯೇ ಬಯಸುತ್ತಾರೆ. ಹೀಗೆಯೇ ದೇಹ, ಇಂದ್ರಿಯ, ಮನಸ್ಸು-ಗಳಿಂದಾಗುವ ಪ್ರಯೋಜನವೆಲ್ಲ ತಮಗೇ ಆಗಿರುತ್ತದೆ. ಜನರು ಯಾವದು ತಮಗೆ ಪ್ರತಿಕೂಲವಾಗಿದ್ದರೂ ಅದನ್ನು ಬಿಟ್ಟುಬಿಡುವದಕ್ಕೆ ಪ್ರಯತ್ನಿಸುತ್ತಾರೆ ; ಯಾವದು ತಮಗೆ ಅನುಕೂಲವಾಗಿದ್ದರೂ ಅದನ್ನು ಸಂಪಾದಿಸುವದಕ್ಕೆ ಪ್ರಯತ್ನಿಸುತ್ತಾರೆ. ಎಲ್ಲಾ ವಸ್ತುಗಳಿಗಿಂತಲೂ ತಮ್ಮ ಆತ್ಮನಲ್ಲಿಯೇ ಪ್ರೇಮವು ಹೆಚ್ಚೆಂಬುದು ಇದರಿಂದ ಗೊತ್ತಾಗುತ್ತದೆ. ದುಃಖರೂಪವಾದ ವಸ್ತುವಿನಲ್ಲಿ ಯಾರಿಗೂ ಪ್ರೇಮವಿರುವದಿಲ್ಲ. ಆದ್ದರಿಂದ ಆತ್ಮನಲ್ಲಿ ಎಲ್ಲಕ್ಕಿಂತಲೂ ಹೆಚ್ಚಿನ ಪ್ರೇಮವು ಎಲ್ಲರಿಗೂ ಯಾವಾಗಲೂ ಇರುವದರಿಂದ ಆತ್ಮನು ಆನಂದರೂಪನೆಂದಾಯಿತು.

ಪ್ರಶ್ನೆ : ಎಷ್ಟೋ ಜನರು ಈ ಜನ್ಮವನ್ನೇ ಕಳೆದುಕೊಳ್ಳುವದಕ್ಕೆ ಸಿದ್ಧರಾಗಿ ಆತ್ಮಹತ್ಯವನ್ನೇ ಮಾಡಿಕೊಳ್ಳುತ್ತಾರಲ್ಲ ! ಆತ್ಮನು ಆನಂದರೂಪನಾಗಿದ್ದರೆ ಇದು ಹೇಗಾದೀತು ?

ಉತ್ತರ : ಯಾವ ಜನ್ಮವನ್ನು ಕಳೆದುಕೊಳ್ಳುವದಕ್ಕೆ ಅವರು ಸಿದ್ಧರಾಗಿರುವರೋ, ಯಾವ ದೇಹಪ್ರಾಣಗಳನ್ನು ಅವರು ನೀಗುವದಕ್ಕೆ ಪ್ರಯತ್ನಿಸುವರೋ, ಅಂಥ ದೇಹ, ಪ್ರಾಣ – ಮುಂತಾದವುಗಳು ತಮಗೆ ದುಃಖಕರವೆಂತಲೂ ಅವುಗಳನ್ನು ಕಳಚಿಹಾಕಿದರೆ ತಾವು ಹಾಯಾಗಿರುವೆವೆಂತಲೂ ಭಾವಿಸಿ ಅವರು ಹಾಗೆ ಮಾಡುತ್ತಾರೆ. ಆದ್ದರಿಂದ ಆ ಜನ್ಮವೂ ಆ ದೇಹಾದಿಗಳೂ ದುಃಖರೂಪವೆಂದೇ ಆಗಲಿ, ಆದರೆ ಆ ದೇಹಾದಿಗಳು ಆತ್ಮನಲ್ಲವೇ ಅಲ್ಲ. ಆದ್ದರಿಂದ ಯಾವ ಆತ್ಮನಿಗಾಗಿ ತಮಗೆ ಪ್ರಿಯವಾಗಿರುವದನ್ನು ಕೂಡ ಬಿಡುವೆವೆಂದು ಜನರು ಸಿದ್ಧರಾಗಿರುವರೋ ಆ ಆತ್ಮನ ಮೇಲೆ ಅವರಿಗೆ ಎಲ್ಲಕ್ಕಿಂತಲೂ ಮಿಗಿಲಾದ ಪ್ರೇಮವಿರುವದೆಂದೇ ಸಿದ್ಧವಾಗುತ್ತದೆ.

ಪ್ರಶ್ನೆ : ನಿಜವಾದ ವಿಷಯಗಳು, ನಿಜವಾದ ದೇಹ, ನಿಜವಾದ ಇಂದ್ರಿಯ – ಮುಂತಾದವುಗಳಿರುವ ಎಚ್ಚರದಲ್ಲಿ ನಿಜವಾದ ವಸ್ತುಗಳನ್ನು ನಿಜವಾದ ಮನಸ್ಸು, ನಿಜವಾದ ಇಂದ್ರಿಯಗಳು – ಇವುಗಳ ಸಹಾಯದಿಂದ ಅರಿಯುವ ಆತ್ಮನು ಜ್ಞಾನಸ್ವರೂಪದಿಂದ ಒಂದೇ ರೀತಿಯಲ್ಲಿರುವದರಿಂದಲೂ, ಎಲ್ಲದರ ಪ್ರೇಮವೂ ತನಗೋಸ್ಕರವಾಗಿರುವದರಿಂದಲೂ ಎಚ್ಚರದ ಆತ್ಮನು ಸತ್ಯಜ್ಞಾನಾನಂದಸ್ವರೂಪನೆಂದು ತಿಳಿಯಲು ಅವಕಾಶವುಂಟು ; ಆದರೆ ಎಲ್ಲವೂ ಸುಳ್ಳಾಗಿರುವ ಕನಸಿನಲ್ಲಿ ಹೇಗೆ ?

ಉತ್ತರ ; ಸುಳ್ಳೇನು, ನಿಜವೇನು ? ಎಲ್ಲಾ ವಸ್ತುಗಳ ಸ್ವಭಾವವೂ ಒಂದೇ. ಇವುಗಳೆಲ್ಲ ಅರಿಯಲ್ಪಡತಕ್ಕವುಗಳೇ ಹೊರತು ಅರಿಯುವವಲ್ಲ ; ಆಯಾ ಅವಸ್ಥೆಗಳಲ್ಲಿ ಇರುವಂತೆ ತೋರತಕ್ಕವುಗಳೇ ಹೊರತು ಬೇರೊಂದು ಅವಸ್ಥೆಯಲ್ಲಿ ಇರುವವಲ್ಲ. ಅನೇಕವಾಗಿದ್ದುಕೊಂಡು ಒಂದಕ್ಕೊಂದು ಸೇರಿ ತಮಗಿಂತ ಬೇರೆಯಾದ ಮತ್ತೊಂದು ವಸ್ತುವಿನ ಪ್ರಯೋಜನಕ್ಕೆ ಇರುವವುಗಳೇ ಹೊರತು ತಮತಮಗಾಗಿ ಇರುವವುಗಳಲ್ಲ. ಆತ್ಮನೋ ಎಂದರೆ ಅವಸ್ಥೆಗಳಲ್ಲಿ ಯಾವಾಗಲೂ ಇದ್ದೇಇರುತ್ತಾನೆ. ಅವನು ಇಲ್ಲವೆಂಬುದೇ ಇಲ್ಲ ; ಅರಿವೆಂಬ ಅವನ ಸ್ವಭಾವವು ಯಾವಾಗಲೂ ಮಾರ್ಪಡುವದಿಲ್ಲ ; ಈ ಆತ್ಮಸ್ವರೂಪದಲ್ಲಿ ಯಾರೊಬ್ಬರಿಗೂ ಯಾವಾಗಲೂ ಹಗೆತನವೆಂಬುದಿಲ್ಲ, ಎಂದೆಂದಿಗೂ ಮಿಗಿಲಿಲ್ಲದ ಪ್ರೇಮವೇ ಇದ್ದುಕೊಂಡಿರುವದು. ಹೀಗಿರುವದರಿಂದ ಆತ್ಮನು ಎಲ್ಲೆಲ್ಲಿಯೂ ಸಚ್ಚಿತ್ಸುಖರೂಪನೇ.

ಪ್ರಶ್ನೆ: ಆತ್ಮನು ತನ್ನ ರೂಪದಿಂದಲೇ ಯಾವಾಗಲೂ ಇರುವ ನಾದರೆ ಆವನಿಗೆ ಕನಸು, ಎಚ್ಚರ – ಎಂದು ಎರಡವಸ್ಥೆಗಳಾಗುವದಕ್ಕೇನು ಕಾರಣ ? ಆವನಿಗೆ ಎರಡವಸ್ಥೆಗಳಿರುವದರಿಂದಲೇ ಆವನು ಒಂದೇ ರೂಪ ವಾಗಿದ್ದುಕೊಂಡಿರುವನೆಂಬುದು ಸುಳ್ಳೆಂದು ತಿಳಿಯಬೇಕಾಗುತ್ತದೆ. ಇದೂ ಅಲ್ಲದೆ ಆತ್ಮನಿಗೆ ಅರಿವೆಂಬುದು ಮುಖ್ಯವಾದ ಸ್ವರೂಪವೆನ್ನಬೇಕಾಗಿದೆ; ಏಕೆಂದರೆ ಮಿಕ್ಕ ಎಲ್ಲಾ ವಿಷಯಗಳೂ ಬೇರೆಬೇರೆಯಾಗುತ್ತಿದ್ದರೂ ಈ ಅರಿವೆಂಬ ಒಂದೇ ಸ್ವರೂಪದಿಂದ ಆತ್ಮನು ಯಾವಾಗಲೂ ಇದ್ದುಕೊಂಡಿರುವ ನೆಂಬ ಕಾರಣದಿಂದಲೇ ಆವನು ಸತ್ಯಸ್ವರೂಪನಾಗಿರುವನೆಂದು ತಾವು ತೋರಿ ಸಿರುತ್ತೀರಿ. ಮತ್ತು ಇದೇ ಚಿದ್ರೂಪದ ಆಧಾರದಿಂದಲೇ ಆತ್ಮನ ಆನಂದತ್ವ ವನ್ನೂ ಸಿದ್ಧಮಾಡಿದಂತಾಗಿರುತ್ತದೆ; ಏಕೆಂದರೆ ಯಾವ ಅರಿವಿನಿಂದ ಎಲ್ಲ ವನ್ನೂ ಪ್ರಿಯವೆಂದು ಅರಿತುಕೊಳ್ಳುವೆವೋ ಆ ಅರಿವೇ ನಮಗೆ ಎಲ್ಲ ಕ್ಕಿಂತಲೂ ಪ್ರಿಯವಾಗಿರುವದೆಂಬ ಕಾರಣದಿಂದಲೇ ಆತ್ಮನು ಆನಂದಸ್ವರೂಪ ನೆಂದು ಸಿದ್ಧವಾಗಿರುತ್ತದೆ. ಆದ್ದರಿಂದ ಆತ್ಮನ ಇಂಥ ಚಿದ್ರೂಪವು ಬೇರ್ಪಡದೆ ಒಂದೇ ರೂಪದಿಂದಿದ್ದರಲ್ಲವೆ, ಸತ್ಯಜ್ಞಾನಾನಂದಸ್ವರೂಪವು ಆತ್ಮನವೆಂದು ಏರ್ಪಡುವದು ? ಆದರೆ ಗಾಢನಿದ್ರೆಯಲ್ಲಿ ಈ ರೂಪವು ಇರುವದೇ ಇಲ್ಲ; ಏಕೆಂದರೆ ಅಲ್ಲಿ ಆತ್ಮನು ಏನನ್ನೂ ಅರಿಯುವದೇ ಇಲ್ಲ. ಅಂತೂ ಆತ್ಮನಿಗೆ ಅರಿವೆಂಬ ಸ್ವಭಾವವು ಇರುವಾಗ ಎಚ್ಚರಕನಸುಗಳೆಂಬ ಎರಡವಸ್ಥೆಗಳಾಗುವದರಿಂದಲೂ ಗಾಢನಿದ್ರೆಯಲ್ಲಿ ಈ ಅರಿವೆಂಬ ಸ್ವಭಾವವೇ ಇಲ್ಲವಾಗಿಬಿಡುವದರಿಂದಲೂ ಆತ್ಮನು ಸಚ್ಚಿತ್ಸುಖರೂಪವೆಂಬುದು ಯಾವಾ ಗಲೂ ಮಾರ್ಪಡದೆ ಇರುವದೆಂಬುದೇ ಅಯುಕ್ತವಾಗುವದಲ್ಲ !

ಉತ್ತರ: ಎಚ್ಚರಕನಸುಗಳು ಸಚ್ಚಿದಾನಂದರೂಪಕ್ಕೆ ಆಗುವವೆಂದು ನಾವು ಹೇಳಲಿಲ್ಲ. ಎಚ್ಚರವು ಯಾರಿಗೆ ಆಗುತ್ತದೆ ? – ಎಂಬ ಪ್ರಶ್ನೆಗೆ ಯಾರು ಅನುಭವಿಸುತ್ತಾರೋ ಅವರಿಗೇ ಆಗುತ್ತದೆ ಎಂದಲ್ಲವೆ, ನಾವು ಹೇಳಿದ್ದು ?

ಪ್ರಶ್ನೆ: ಇದೇನು ? ಎಚ್ಚರವು ನನಗೇ ಆಗುವದೆಂದು ಮೊದಲು ನಿರ್ಣಯವಾಗಲಿಲ್ಲವೆ ?

**ಉತ್ತರ :** ಹೌದು. "ನಾನು ಅನುಭವಿಸುತ್ತೇನೆ" ಎಂದಿಟ್ಟು ಕೊಂಡರೆ ಹಾಗೆಯೇ ಸರಿ.

**ಪ್ರಶ್ನೆ :** ಹೀಗೆ ಇಟ್ಟುಕೊಳ್ಳುವವನೂ ನಾನೇ ಅಷ್ಟೆ ?

**ಉತ್ತರ :** ಹೌದು. ಆದರೆ ಹಾಗೆ ಇಟ್ಟುಕೊಳ್ಳುವವನ ನಿಜವಾದ ಸ್ವರೂಪವು ಸಚ್ಚಿದಾನಂದರೂಪವು, ಅವನೇ ಅಲ್ಲ.

**ಪ್ರಶ್ನೆ :** ಅಂದರೆ ಸಚ್ಚಿದಾನಂದಸ್ವರೂಪವೇ ಹೀಗೆ ಅಭಿಮಾನ ವಿಟ್ಟುಕೊಳ್ಳುತ್ತದೆ ಎಂದಾಯಿತು.

**ಉತ್ತರ :** ಹಾಗಲ್ಲ. ನಾನು ಎಂಬುದೇ ಅಭಿಮಾನವಿಟ್ಟುಕೊಂಡಿರುವದು, ಸಚ್ಚಿದಾನಂದರೂಪಕ್ಕೆ ಯಾವ ಅಭಿಮಾನವೂ ಇಲ್ಲ.

**ಪ್ರಶ್ನೆ :** ಇದೇನೋ ನನಗೆ ತಿಳಿಯುವಂತಿಲ್ಲ. ನಾನೇ ಸಚ್ಚಿದಾನಂದ ರೂಪನೆಂದು ಮೊದಲು ಹೇಳಿದಿರಿ. ಈಗ ನನಗೆ ಅಭಿಮಾನವಿರುವದೆಂತಲೂ ಸಚ್ಚಿದಾನಂದರೂಪಕ್ಕೆ ಇಲ್ಲವೆಂತಲೂ ಹೇಳುತ್ತೀರಿ !

**ಉತ್ತರ :** ನಿನ್ನ ನಿಜವಾದ ಸ್ವರೂಪವೇ ಸಚ್ಚಿದಾನಂದರೂಪವೆಂದೂ ನಿನ್ನಲ್ಲಿ ತೋರುವ ನಾನು ಎಂಬುದು ಅಭಿಮಾನರೂಪವೆಂದೂ ನಾವು ಹೇಳಿದೆವು. ಈ ನಾನು ಎಂಬ ಅಭಿಮಾನಕ್ಕೆ ಅಹಂಕಾರವೆಂದು ಹೆಸರು. ಹೀಗೆ ಅಹಂಕಾರದಲ್ಲಿ ಅವಸ್ಥೆಗಳು ತೋರಿದರೂ ನಿಜವಾದ ನಿನ್ನ ಸಚ್ಚಿದಾನಂದ ರೂಪಕ್ಕೆ ಅವಸ್ಥೆಗಳಿಲ್ಲ. ಹೀಗೆ ಹೇಳಿದ್ದರಿಂದ ಯಾವ ವಿರೋಧವೂ ಆಗುವದಿಲ್ಲ. ಏಕೆಂದರೆ ಅಹಂಕಾರವು ನಿನ್ನ ನಿಜವಾದ ಸ್ವರೂಪವಲ್ಲ.

**ಪ್ರಶ್ನೆ :** ಏಕಲ್ಲ ? ನಾನು ಯಾವಯಾವಾಗ ವ್ಯವಹಾರಮಾಡುವೆನೋ ಆಗಾಗಲೆಲ್ಲ 'ನಾನು', 'ನಾನು'–– ಎಂದೇ ನನ್ನ ರೂಪವು ತೋರಿಕೊಳ್ಳುತ್ತದೆಯಲ್ಲವೆ ? ನಾನು ಎಂಬುದು ನನ್ನ ನಿಜವಾದ ರೂಪವಲ್ಲದಿದ್ದರೆ ಇಂದ್ರಿಯಾದಿಗಳಂತೆ ಇದೂ ನನಗೆ ವಿಷಯವಾಗಿ ತೋರಿಕೊಳ್ಳಬೇಕಾಗಿತ್ತಲ್ಲವೆ?

**ಉತ್ತರ :** ವ್ಯವಹಾರದಲ್ಲೆಲ್ಲ ನಾನು ಎಂದು ತೋರುವದೆಂಬುದು ಸ್ವಾಭಾವಿಕವಾಗಿದೆ. ಏಕೆಂದರೆ ವ್ಯವಹಾರವೆಂದರೇ 'ನಾನು', 'ನನ್ನದು', ಮತ್ತೊಬ್ಬರು'–ಎಂದು ತೋರುವದು. ಆದರೆ 'ನಾನು' ಎಂದು ತೋರುವ

ದೆಂದು ಏತರ ಬಲದಿಂದ ಹೇಳುತ್ತೀಯೋ ಆ ರೂಪವು ನಿನ್ನ ನಿಜವಾದ ರೂಪವು. ಆ ರೂಪವೇ ಸಚ್ಚಿದಾನಂದರೂಪವೆಂದು ನಾವು ಕರೆದಿರುವದು. ಅಹಂಕಾರವು ನಿನ್ನ ನಿಜವಾದ ರೂಪದಲ್ಲಿ ಸೇರಿರುವದಿಲ್ಲವೆಂಬುದಕ್ಕೆ ಗಾಢ ನಿದ್ರೆಯ ಅನುಭವವೇ ಪ್ರಮಾಣವಾಗಿದೆ. ಏಕೆಂದರೆ ಅದೇ ನಿನ್ನ ನಿಜವಾದ ರೂಪವಾಗಿದ್ದರೆ ಅದು ಗಾಢನಿದ್ರೆಯಲ್ಲಿಯೂ ತೋರಬೇಕಾಗಿತ್ತು.

ಪ್ರಶ್ನೆ : ಹಾಗಾದರೆ ಜ್ಞಾನಸ್ವರೂಪವೂ ನನ್ನ ನಿಜವಾದ ಸ್ವರೂಪ ವಲ್ಲವೆಂದೇ ಆಗುತ್ತದೆಯಲ್ಲ! ಏಕೆಂದರೆ ನಾನು ಮೊದಲೇ ಹೇಳಿರುವಂತೆ ಗಾಢನಿದ್ರೆಯಲ್ಲಿ ನನಗೆ ಏತರ ಅರಿವೂ ಇರುವದಿಲ್ಲ. ಹೀಗೆ ನಾನೆಂಬ ಅಹಂಕಾರವಾಗಲಿ ಅಥವಾ ತಾವು ತೋರಿಸಿದ ಚಿದ್ರೂಪವಾಗಲಿ ಗಾಢನಿದ್ರೆ ಯಲ್ಲಿ ಇಲ್ಲದಿರುವದರಿಂದ ನನಗೆ ನಿಜವಾಗಿ ಯಾವ ರೂಪವೂ ಇಲ್ಲವೆಂದೇ ತೋರುವದಲ್ಲ!

ಉತ್ತರ : ಇದು ಸರಿಯಲ್ಲ. ಹೀಗೆಯೇ ವಿಚಾರಮಾಡಿ ಹಿಂದೆ ಕೆಲವು ಜನ ಬೌದ್ಧರು ತಮ್ಮ ಸ್ವರೂಪವು ಯಾವದೂ ಇಲ್ಲವೆಂದು ನಿರ್ಣಯ ಮಾಡಿಕೊಂಡಿದ್ದರು· ಆ ವಾದಕ್ಕೆ ಶೂನ್ಯವಾದವೆಂದು ಹೆಸರು. ಶೂನ್ಯ ವೆಂದರೆ ಯಾವದೂ ಇಲ್ಲವೆಂದರ್ಥ.

ಪ್ರಶ್ನೆ : ಶೂನ್ಯವಾದವೂ ಅನುಭವಕ್ಕೆ ಸರಿಯಾಗಿ ಹೊಂದಿದರೆ ಏತ ಕ್ಕಾಗಬಾರದು ? ಎಲ್ಲಾ ಅವಸ್ಥೆಗಳನ್ನೂ ಪೂರ್ಣವಾಗಿ ವಿಚಾರಮಾಡಿದ ಅನುಭವವೇ ಸರಿಯಾದದ್ದೆಂದು ತಾವೇ ಹೇಳಿದ್ದೀರಷ್ಟೆ ?

ಉತ್ತರ : ನಿಜ. ಆದರೆ ನೀನು ಹೇಳುವ ವಾದವು ಅನುಭವಕ್ಕೆ ಸರಿಯಾಗಿಯೂ ಇಲ್ಲ : ನೀನು ಮಾಡಿದ ನಿರ್ಣಯವು ಎಲ್ಲಾ ಅವಸ್ಥೆಗಳ ಪೂರ್ಣವಾದ ವಿಚಾರದಮೇಲೆ ಆದದ್ದೂ ಅಲ್ಲ.

ಪ್ರಶ್ನೆ : ಅದು ಹೇಗೆ ?

ಉತ್ತರ : ಹೇಗೆಂದರೆ, ಗಾಢನಿದ್ರೆಯಲ್ಲಿ ಜ್ಞಾನಸ್ವರೂಪವು ಇಲ್ಲ ವೆಂದು ಹೇಳುವದಕ್ಕೆ ಯಾವ ಆಧಾರವೂ ಇಲ್ಲ.

ಪ್ರಶ್ನೆ : ಏಕಿಲ್ಲ ? ಇದ್ದರೆ ನನಗೆ ತೋರಬೇಕಷ್ಟೆ ? ಗಾಢನಿದ್ರೆ ಯಲ್ಲಿ ನನಗೆ ಈ ಜ್ಞಾನರೂಪವಾಗಲಿ ಇನ್ನು ಯಾವ ಬೇರೆಯ ರೂಪವಾಗಲಿ ಎಂದೂ ತೋರಿಲ್ಲ. ಇಷ್ಟನುಭವ ಸಾಲದೆ ?

**ಉತ್ತರ :** ನಿನಗೆ ಯಾವದೂ ತೋರಲಿಲ್ಲ ಎಂಬುದರಿಂದಲೇ ಆಗ ನಿನ್ನ ಅರಿವಿನ ಸ್ವಭಾವವು ಇತ್ತೆಂದು ಸ್ಫುಟವಾಗಿರುತ್ತದೆ. ಏಕೆಂದರೆ ನೀನು ಅರಿತ ಪದಾರ್ಥವು ಯಾವದೂ ಇಲ್ಲವೆನ್ನುತ್ತಿದೀಯೇ ಹೊರತು ನಿನ್ನ ಅರಿವಿನ ಸ್ವರೂಪವೂ ಇಲ್ಲವೆನ್ನುತ್ತಿಲ್ಲ.

**ಪ್ರಶ್ನೆ :** ಆ ಅರಿವಿನ ಸ್ವರೂಪವೆಂಬುದೂ ಗಾಢನಿದ್ರೆಯಲ್ಲಿ ತೋರುವದೇ ಇಲ್ಲವಲ್ಲ !

**ಉತ್ತರ :** ತೋರದೆಹೋದರೆ ಹೋಗಲಿ, ಅರಿವೆಂಬುದು ನಿನಗೆ ತೋರುವ ಮತ್ತೊಂದು ಪದಾರ್ಥವೆಂದೇನೂ ನಾವು ಹೇಳಲಿಲ್ಲ. ಅರಿವೇ ನಿನ್ನ ಸ್ವರೂಪವೆಂದೂ ಅದು ವಿಷಯುವಲ್ಲವೆಂದೂ ಮತ್ತೊಂದರ ಸಹಾಯವಿಲ್ಲದೆ ಯಾವಾಗಲೂ ತಾನೇ ಬೆಳಗುವದೆಂದೂ ನಾವು ಹೇಳಿದೆವು. ಇದನ್ನು ನೀನೂ ಒಪ್ಪಿಕೊಂಡಿದ್ದೀಯೆ.

**ಪ್ರಶ್ನೆ :** ನಾನೆಲ್ಲಿ ಒಪ್ಪಿಕೊಂಡೆನು ? ಚಿದ್ರೂಪವೇ ತೋರುವದಿಲ್ಲವೆಂದಲ್ಲವೆ, ನಾನು ಹೇಳಿದ್ದು ?

**ಉತ್ತರ :** ಹೌದು. ಆದ್ದರಿಂದಲೇ ಯಾವ ನಿನಗೆ ಆ ಚಿದ್ರೂಪವು ತೋರುವದಿಲ್ಲವೋ ಆ ನೀನು ಚಿದ್ರೂಪನೆಂದಾಯಿತು. ಚಿದ್ರೂಪವು ವಿಷಯುವಲ್ಲವಾದ್ದರಿಂದ ತೋರುವದಿಲ್ಲ. ಗಾಢನಿದ್ರೆಯಲ್ಲಿ ಯಾವದಾದರೂ ವಿಷಯುವಿದ್ದಿದ್ದರೆ ತೋರುತ್ತಿತ್ತೆಂದೂ ಗಾಢನಿದ್ರೆಯಲ್ಲಿ ಯಾವದೂ ತೋರದೆ ಇದ್ದದ್ದರಿಂದ ಅಂಥದ್ದು ಯಾವದೂ ಇಲ್ಲವೆಂದೂ ನೀನು ಹೇಳುವದರಿಂದ, ಆಗಲೂ ನಿನಗೆ ಅರಿವಿನ ಸ್ವಭಾವವಿತ್ತೆಂದೇ ನೀನು ಒಪ್ಪಿಕೊಂಡಂತಾಯಿತು ಇದರಿಂದ ಸಚ್ಚಿದಾನಂದಸ್ವರೂಪವು, ಯಾವಾಗಲೂ ಇರುವದೆಂಬುದೂ ಸಿದ್ಧವಾಯಿತು.

**ಪ್ರಶ್ನೆ :** ಇಲ್ಲಿ ಒಂದು ಶಂಕೆಯುಂಟಾಗುತ್ತದೆ. ಎಚ್ಚರಕನಸುಗಳಲ್ಲಿ ಅಹಂಕಾರವಿರುವದರಿಂದ ಸಚ್ಚಿದಾನಂದರೂಪಕ್ಕೆ ಆ ಅವಸ್ಥೆಗಳಿಲ್ಲವೆಂದು ತಾವು ಹೇಳಿದ್ದೀರಿ. ಗಾಢನಿದ್ರೆಯಲ್ಲಿ ಅಹಂಕಾರವಿಲ್ಲವೆಂಬುದನ್ನೂ ತಾವೇ ತೋರಿಸಿದ್ದೀರಿ. ಇದರಿಂದ ಗಾಢನಿದ್ರೆಯೂ ಸಚ್ಚಿದಾನಂದರೂಪಕ್ಕೇ ಎಂದಾಯಿತಲ್ಲ !

**ಉತ್ತರ :** ಗಾಢನಿದ್ರೆಯೆಂದರೇನು ? ಯಾವದೂ ತೋರದೆ ಇರುವದೇ ಅಲ್ಲವೆ ? ಅದು ಒಂದು ಅವಸ್ಥೆಯೆಂದು ಹೇಗಾದೀತು ? 'ಯಾವ

ರೋಗವೂ ಇಲ್ಲದ ರೋಗಿ' ಎಂಬುದು ಹೇಗೆ ಅರ್ಥವಿಲ್ಲದ ಮಾತೋ ಹಾಗೆ ಏನೂ ತೋರದಿರುವದೇ ಆತ್ಮನಲ್ಲಿ ಆಗುವ ಒಂದಾನೊಂದು ವಿಕಾರವೆಂಬ ಮಾತೂ ಅರ್ಥವಿಲ್ಲದ ಮಾತೇ.*

ಪ್ರಶ್ನೆ : ಅದು ಹೇಗೆ ? ಆತ್ಮನು ಎಚ್ಚರಕನಸುಗಳಲ್ಲಿ ಏನನ್ನಾದರೂ ನೋಡುತ್ತಾನೆ. ನಿದ್ರೆಯಲ್ಲಿ ಏನನ್ನೂ ನೋಡುವದಿಲ್ಲ. ಇವೆರಡೂ ಆತ್ಮನ ಧರ್ಮವೇ ಅಲ್ಲವೆ ?

ಉತ್ತರ : ಅಲ್ಲ. ದೀಪವಿರುವ ಸ್ಥಳದಲ್ಲಿ ಕೆಲವು ಪದಾರ್ಥಗಳಿದ್ದರೆ ಆ ಪದಾರ್ಥಗಳನ್ನು ಅದು ತೋರಿಸುವದು, ಅವುಗಳು ಇಲ್ಲದಿರುವಾಗ ಅದು ತಾನೇ ಬೆಳಗುವದು. ಈ ಎರಡು ಕಾಲಗಳಲ್ಲಿಯೂ ದೀಪದ ಬೆಳಕಿನಲ್ಲಿ ಯಾವ ಹೆಚ್ಚುಕಡಿಮೆಯೂ ಇರುವದಿಲ್ಲ. ಹೀಗೆಯೇ ಆತ್ಮನು ಎಚ್ಚರ ಕನಸುಗಳಲ್ಲಿ ಅನಾತ್ಮವಸ್ತುಗಳನ್ನು, ಎಂದರೆ ಆತ್ಮನಲ್ಲದ ವಸ್ತುಗಳನ್ನು, ಅರಿಯುವಾಗಲೂ ಗಾಢನಿದ್ರೆಯಲ್ಲಿ ಯಾವದನ್ನೂ ಅರಿಯದೆ ಇರುವಾಗಲೂ ಅವನ ಅರಿವಿನಲ್ಲಿ ಯಾವ ವಿಶೇಷವೂ ಇಲ್ಲವಾದ್ದರಿಂದ ಅರಿಯುವದು, ಅರಿಯದಿರುವದು – ಎಂಬಿವು ಆತ್ಮನ ಧರ್ಮಗಳಲ್ಲ.

## ಆತ್ಮನು ತುರೀಯನು

(ತುರೀಯವಸ್ತು)

ಪ್ರಶ್ನೆ : ಹಾಗಾದರೆ ನಿದ್ರೆಯೆಂಬುದು ಒಂದವಸ್ಥೆಯಲ್ಲವೆಂದೇ ಅಭಿಪ್ರಾಯವೆ ?

---

* ಗಾಢನಿದ್ರೆಯಲ್ಲಿ ಏನೂ ತೋರುವದಿಲ್ಲವೆಂಬುದು ಎಲ್ಲರಿಗೂ ಅನುಭವದಲ್ಲಿರುವ ವಿಷಯ. ಹೀಗೆ ತೋರದಿರುವದಕ್ಕೆ ಆತ್ಮನಿಗೆ 'ಮೂಲಾವಿದ್ಯೆ'ಯೆಂಬ ಒಂದಾನೊಂದು ಮುಸುಕು ಇರುವದೇ ಕಾರಣವೆಂದು ಕೆಲವರು ವೇದಾಂತಿಗಳು ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಇದು ಭಾಷ್ಯಯುಕ್ತ್ಯನುಭವಗಳಿಗೆ ವಿರುದ್ಧವಾಗಿರುತ್ತದೆ. ಮೂಲಾವಿದ್ಯೆಯ ಸ್ವರೂಪವಿವರಣೆ, ಅದು ಇದೆಯೆಂಬುದಕ್ಕೆ ಆ ವಾದಿಗಳು ಹೇಳುವ ಪ್ರಮಾಣಗಳು, ಆ ವಾದವನ್ನು ಖಂಡಿಸುವ ಯುಕ್ತಿಗಳು – ಇವೆಲ್ಲವೂ ಬಹಳ ಕಠಿನವಾಗಿರುವದರಿಂದ ಈ ಬಾಲಬೋಧೆಯಲ್ಲಿ ಅದನ್ನು ವಿವರಿಸಿಲ್ಲ. 'ಶಂಕರಸಿದ್ಧಾಂತ'ವೆಂಬ ಕನ್ನಡ ಗ್ರಂಥದಲ್ಲಿಯೂ 'ಮೂಲಾವಿದ್ಯಾನಿರಾಸ'ವೆಂಬ ಸಂಸ್ಕೃತಗ್ರಂಥದಲ್ಲಿಯೂ ಇದರ ವಿಚಾರವನ್ನು ವಿಸ್ತಾರವಾಗಿ ಮಾಡಿರುತ್ತವೆ. ಆದರೆ ಈ ಗ್ರಂಥಗಳು ಈಗ ಲಭ್ಯವಿಲ್ಲ, ಪ್ರತಿಗಳು ಮುಗಿದಿವೆ.

ಉತ್ತರ : ಹೌದು. ಆದ್ದರಿಂದಲೇ ನಿದ್ರೆಯಿಂದಾಗುವ ಕನಸೂ ನಿದ್ರೆಯಿಂದ ಎದ್ದಮೇಲೆ ತೋರುವ ಎಚ್ಚರವೂ ಅವಸ್ಥೆಗಳಲ್ಲವೆಂದೂ ಆಯಿತು.

ಪ್ರಶ್ನೆ : ಹಾಗಾದರೆ ಅವಸ್ಥಾತ್ರಯವಿಚಾರದಿಂದ ಆತ್ಮನನ್ನು ಮನಸ್ಸಿನಿಂದ ಬೇರ್ಪಡಿಸಿ ತಿಳಿದುಕೊಳ್ಳಬಹುದೆಂದು ತಾವು ಹಿಂದೆ ಹೇಳಿದ ಮಾತಿನ ಅಭಿಪ್ರಾಯವೇನು ? ಅವಸ್ಥೆಗಳೇ ಇಲ್ಲದಿರುವಾಗ ಅವಸ್ಥಾವಿಚಾರವೆಲ್ಲಿ ಬಂತು ?

ಉತ್ತರ : ಜನರು ತಾವು ಎಚ್ಚರ, ಕನಸು, ಗಾಢನಿದ್ರೆ- ಇವುಗಳನ್ನು ನಿತ್ಯವೂ ಪಡೆಯುತ್ತಿರುವದಾಗಿ ನಂಬಿರುವರು ; ಮನಸ್ಸೇ ಜ್ಞಾನಸ್ವರೂಪವೆಂದೂ ಇದಕ್ಕಿಂತ ಬೇರೆಯಾದ ಆತ್ಮನು ಇಲ್ಲವೇಇಲ್ಲವೆಂದೂ ಅವರ ನಂಬಿಕೆಯಿದೆ. ಅವರು ಹೀಗೆ ನಂಬಿರುವ ಈ ಮೂರು ಅವಸ್ಥೆಗಳನ್ನೂ ವಿಚಾರಮಾಡಿದರೆ ಆತ್ಮನ ನಿಜವಾದ ಸ್ವರೂಪದ ನಿರ್ಣಯವಾಗುವದು. ಈ ಮೂರವಸ್ಥೆಗಳೂ ನಿಜವಾಗಿ ಇಲ್ಲವೆಂಬುದೂ ಗೊತ್ತಾಗುವದು. ಇದೇ ನಾವು ಹೇಳಿದ್ದರ ಅಭಿಪ್ರಾಯ.

ಪ್ರಶ್ನೆ : ಹಾಗಾದರೆ ಶ್ಲೋಕದಲ್ಲಿ ಆತ್ಮನು 'ತುರೀಯನು', ಎಂದರೆ ನಾಲ್ಕನೆಯವನು, ಎಂದು ಹೇಳಿದೆಯಲ್ಲ ! ಮೂರೇ ಇಲ್ಲದಿರುವಾಗ ನಾಲ್ಕನೆಯದೆಂಬುದೆಲ್ಲಿ ಬಂತು ?

ಉತ್ತರ : ತುರೀಯನೆಂದರೆ ಜನರು ಆತ್ಮನಲ್ಲಿ ಹುಟ್ಟುಗಟ್ಟಿಕೊಂಡಿರುವ ಮೂರು ಅವಸ್ಥಾರೂಪಗಳಿಗಿಂತ ಬೇರೆಯೆಂದು ಅರ್ಥವೇ ಹೊರತು ನಿಜವಾಗಿ ನಾಲ್ಕನೆಯದೆಂದು ಅಭಿಪ್ರಾಯವಲ್ಲ. ಸರಿಯಾಗಿ ನೋಡಿದರೆ ಎಚ್ಚರ, ಕನಸು, ಗಾಢನಿದ್ರೆ-ಇವುಗಳು ಇವೆಯೆನ್ನುವಾಗಲೂ ಈ ನಾಲ್ಕನೆಯ ಸ್ವಭಾವವೇ ಇರುತ್ತಿರುವದು. ಈ ಸ್ವಭಾವವು ಇಲ್ಲವೆಂಬ ಕಾಲವೇ ಇಲ್ಲವಾದ್ದರಿಂದ ಕಾಲವು ತೋರದಾಗಲೂ ಇದು ಇದ್ದುಕೊಂಡಿರುವದರಿಂದಲೂ ಇದನ್ನು ಒಂದು ಗೊತ್ತಾದ ಕಾಲದಲ್ಲಿ ಆಗುವ ಅವಸ್ಥೆ ಎನ್ನುವದಕ್ಕಿಲ್ಲ. ಏಕೆಂದರೆ ಯಾವದಾದರೂ ಒಂದು ಕಾಲದಲ್ಲಿ ಆಗಿಹೋಗುವ ವಿಕಾರಕ್ಕೇ 'ಅವಸ್ಥೆ'* ಎಂದು ಹೆಸರು.

---

* ಕೆಲವು ಸಾಧನೆಗಳಿಂದ ಪಡೆಯಬೇಕಾದ ಸಮಾಧಿಯೆಂಬ ಅವಸ್ಥೆಯೇ "ತುರೀಯ"ವೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಇದರ ವಿಮರ್ಶೆಯನ್ನು ಈ ಗ್ರಂಥಾವಳಿಯ ಬೇರೊಂದು ಗ್ರಂಥದಲ್ಲಿ ಮಾಡಲಾಗಿದೆ.

# ಆತ್ಮನು ಪರಮಹಂಸರಿಗೇ ದೊರಕತಕ್ಕವನು

(ಪರಮಹಂಸಗತಿವಿಚಾರ)

ಪ್ರಶ್ನೆ: ತಾವು ಹೇಳಿದಂತೆ ಆತ್ಮನ ಸ್ಥಿತಿಯು ಯಾವಾಗಲೂ ಇರತಕ್ಕದ್ದಾದರೆ ನಮ್ಮೆಲ್ಲರಿಗೂ ಇದು ಏತಕ್ಕೆ ಸುಲಭವಾಗಿ ತಿಳಿಯುವದಿಲ್ಲ ?

ಉತ್ತರ: ಸಾಧಾರಣವಾಗಿ ಇಲ್ಲದ್ದನ್ನು ಕಲ್ಪಿಸಿಕೊಳ್ಳುತ್ತಿರುವದೇ ಮನಸ್ಸಿನ ಸ್ವಭಾವವಾಗಿದೆ. ಹೀಗೆ ಕಲ್ಪಿಸಿಕೊಂಡ ವಿಷಯಗಳಲ್ಲಿ ಅದಕ್ಕೆ ತುಂಬ ಅಭಿಮಾನವಿರುತ್ತದೆ. ಹೀಗಿರುವದರಿಂದ ಇದನ್ನೆಲ್ಲ ಬಿಟ್ಟು ನಿಜವಾದ ಆತ್ಮತತ್ತ್ವವನ್ನೇ ಆರಿಸಿ ತೆಗೆದುಕೊಳ್ಳುವದು ಎಲ್ಲರಿಗೂ ದಕ್ಕಲಾರದು. ಅದಕ್ಕೆ ವಿರಕ್ತರಾದ ಪರಮಹಂಸರು ಬೇಕಾಗುವದು.

ಪ್ರಶ್ನೆ: ಪರಮಹಂಸರೆಂದರೆ ಯಾರು ?

ಉತ್ತರ: ಕಾವ್ಯಾದಿಗಳಲ್ಲಿ ರಾಜಹಂಸವೆಂಬ ಪಕ್ಷಿಯೊಂದು ಪ್ರಸಿದ್ಧವಾಗಿರುವದು. ಈ ಹಂಸದ ಮುಂದೆ ಹಾಲನ್ನೂ ನೀರನ್ನೂ ಬೆರೆಸಿಟ್ಟರೆ ನಿಸ್ಸಾರವಾದ ನೀರನ್ನು ಬೇರ್ಪಡಿಸಿ ಸಾರವಾದ ಹಾಲನ್ನೇ ತೆಗೆದುಕೊಂಡು ಸವಿಯುವ ಯೋಗ್ಯತೆಯು ಇದಕ್ಕೆ ಇದೆಯಂತೆ. ಇದರಂತೆಯೇ 'ಯಾವ ಮಹಾಪುರುಷರು ಆತ್ಮ, ಅನಾತ್ಮ- ಎಂಬೀ ಎರಡೂ ಬೆರಕೆಯಾಗಿರುವ ಈ ಜಗತ್ತಿನಲ್ಲಿ ಅನಾತ್ಮವೆಂಬುದು ನಿಸ್ಸಾರವೆಂದು ಅವುಗಳಲ್ಲಿ ವಿರಕ್ತಿಯಿಂದ ಶಮದಮಾದಿಸಾಧನವುಳ್ಳವರಾಗಿ ಆತ್ಮತತ್ತ್ವದಿಂದ ಆ ಅನಾತ್ಮವನ್ನು ಬೇರ್ಪಡಿಸಿ ಮೇಲೆ ಹೇಳಿರುವಂಥ ಸಚ್ಚಿದಾನಂದರೂಪದಲ್ಲಿಯೇ ನಿಲ್ಲುವ ಯೋಗ್ಯತೆಯುಳ್ಳವರಾಗಿರುವರೋ ಅಂಥವರಿಗೆ ಪರಮಹಂಸರೆಂದು ಹೆಸರು.

ಪ್ರಶ್ನೆ: ವಿರಕ್ತಿಯೆಂದರೇನು ?

ಉತ್ತರ: ರಕ್ತಿ ಎಂದರೆ ಹತ್ತಿರವಿರುವ ವಸ್ತುವಿನ ಬಣ್ಣವು ಬಳಿದುಕೊಂಡಂತೆ ಮನಸ್ಸಿನಲ್ಲಿ ಉಂಟಾಗುವ ಅಭಿಮಾನವು; ವಿರಕ್ತಿ ಎಂದರೆ ಅಭಿಮಾನವಿಲ್ಲದೆ ಇರುವದು. ಅನಾತ್ಮವಸ್ತುವಿನಲ್ಲಿ ವಿರಕ್ತಿಯಿರುವವರು ಪರಮಹಂಸಾಶ್ರಮವೆಂದು ಪ್ರಸಿದ್ಧವಾಗಿರುವ ಸಂನ್ಯಾಸವನ್ನು ಸ್ವೀಕರಿಸಿ ವೇದಾಂತವಿಚಾರವನ್ನು ಮಾಡುವರು.

ಪ್ರಶ್ನೆ : ಹಾಗಾದರೆ ಸಂನ್ಯಾಸಿಗಳಲ್ಲದ ನಮ್ಮಂಥವರಿಗೆ ವೇದಾಂತವು ತಿಳಿಯುವದೇ ಇಲ್ಲವೆಂದಾಯಿತು.

ಉತ್ತರ : ಹಾಗೇನೂ ಇಲ್ಲ. ಅನಾತ್ಮವಸ್ತುವಿನಲ್ಲಿ ವಿಶೇಷವಾದ ಅಭಿಮಾನವನ್ನಿಟ್ಟುಕೊಂಡಿರುವವರಿಗೆ ಇದು ತಿಳಿಯುವದು ಕಷ್ಟವೆಂದು ನಮ್ಮ ಅಭಿಪ್ರಾಯ. ಸಂನ್ಯಾಸವೆಂಬುದು ಅಭಿಮಾನವನ್ನು ಬಿಟ್ಟದ್ದರ ಗುರುತಾಗಿದೆ.

## ಆ ಬ್ರಹ್ಮವೇ ನಾನು, ನಾನು ಭೂತಸಂಘವಲ್ಲ

(ತದ್ಬ್ರಹ್ಮ ನಿಷ್ಕಲಮಹಂ ನ ಚ ಭೂತಸಙ್ಘಃ)

ಪ್ರಶ್ನೆ : ಒಳ್ಳೆಯದು. ಹೀಗೆ ಅಭಿಮಾನವನ್ನು ಬಿಟ್ಟು ಆತ್ಮತತ್ತ್ವವನ್ನು ಸಂಪೂರ್ಣವಾಗಿ ತಿಳಿದುಕೊಂಡಿರುವವರ ಅನುಭವವು ಹೇಗಿರುವದು ?

ಉತ್ತರ : 'ಯಾವ ಅವಯವಗಳೂ ಇಲ್ಲದ ಬ್ರಹ್ಮವೇ ನಾನು' – ಎಂದು ಅವರು ಅರಿತಿರುವರು.

ಪ್ರಶ್ನೆ : ಬ್ರಹ್ಮವೆಂದರೇನು ?

ಉತ್ತರ : ಉಪನಿಷತ್ತುಗಳಲ್ಲಿ ಬ್ರಹ್ಮದ ವರ್ಣನೆಯಿದೆ. ಬ್ರಹ್ಮ ಎಂಬ ಮಾತಿಗೆ ದೊಡ್ಡದೆಂದರ್ಥ. ಯಾವಾಗಲೂ ಶುದ್ಧಸ್ವರೂಪವಾಗಿಯೂ ಅರಿವಿನ ಸ್ವರೂಪವಾಗಿಯೂ ಯಾವ ವಿಧವಾದ ಕಟ್ಟಿಗೂ ಒಳಪಡದ್ದಾಗಿಯೂ ಯಾವಾಗಲೂ ಒಂದೇ ರೂಪದಲ್ಲಿರತಕ್ಕದ್ದಾಗಿಯೂ ಇರುವದರಿಂದ ಬ್ರಹ್ಮವು ಎಲ್ಲಕ್ಕೂ ದೊಡ್ಡದು. ಜ್ಞಾನಿಗಳು ಅರಿತುಕೊಂಡಿರುವ ಆತ್ಮತತ್ತ್ವವೇ ಈ ಬ್ರಹ್ಮವು.

ಪ್ರಶ್ನೆ : ಹಾಗಾದರೆ ಅಜ್ಞಾನಿಗಳ ತಿಳಿವಳಿಕೆ ಹೇಗಿರುವದು ?

ಉತರ : ಇದನ್ನು ಮೊದಲೇ ತಿಳಿಸಿರುತ್ತೇವೆ. ಇವರು ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ – ಎಂಬ ಐದು ಭೂತಗಳಿಂದಾಗಿರುವ ದೇಹೇಂದ್ರಿಯಮನಸ್ಸುಗಳೇ ತಾವೆಂತಲೂ ತಮಗೆ ನಿತ್ಯವೂ ಜಾಗ್ರತ್‌ಸ್ವಪ್ನ ಸುಷುಪ್ತಿಗಳು ಆಗುತ್ತಿರುವವೆಂತಲೂ ತಿಳಿದುಕೊಂಡಿರುವರು.

ಪ್ರಶ್ನೆ : ಪಂಚಭೂತಗಳ ಸ್ವರೂಪವೇನು ?

ಉತ್ತರ : ಕಿವಿ, ಚರ್ಮ, ಕಣ್ಣು, ನಾಲಗೆ, ಮೂಗು – ಇವುಗಳಲ್ಲಿರುವ ಜ್ಞಾನೇಂದ್ರಿಯಗಳ ಸೋಂಕಿನಿಂದ ಜಗತ್ತಿನಲ್ಲಿ ಶಬ್ದ, ಸ್ಪರ್ಶ,

ರೂಪ, ರಸ, ಗಂಧ – ಎಂಬ ಐದು ಗುಣಗಳು ತೋರುವವಷ್ಟೆ ; ಇವಕ್ಕೆ ಆಶ್ರಯವಾಗಿ, ಕ್ರಮವಾಗಿ ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥ್ವಿ – ಎಂಬ ವಸ್ತುಗಳಿರುವವು. ಇವುಗಳಿಗೆ ಪಂಚಭೂತಗಳು ಎಂದು ಹೆಸರು. ದೇಹ, ಇಂದ್ರಿಯ, ಮನಸ್ಸು – ಇವೆಲ್ಲವೂ ಈ ಭೂತಗಳಿಂದಲೇ ಆಗಿರುತ್ತವೆ.

ಪ್ರಶ್ನೆ : ಪಂಚಭೂತಗಳಿಗೂ ಆತ್ಮನಿಗೂ ಯಾವ ಸಂಬಂಧವೂ ಇಲ್ಲವೆ ?

ಉತ್ತರ : ಎಳ್ಳಷ್ಟೂ ಇಲ್ಲ ; ಏಕೆಂದರೆ ನಾವು ಹಿಂದೆಯೇ ತಿಳಿಯಪಡಿಸಿರುವಂತೆ ಸುಷುಪ್ತಿಯಲ್ಲಿ ಯಾವ ಭೂತವೂ ಎಲ್ಲಿಯೂ ಇರುವದಿಲ್ಲ ; ಒಂದೊಂದವಸ್ಥೆಯಲ್ಲಿ ಉಳಿದೆರಡು ಅವಸ್ಥೆಗಳು ಎಲ್ಲಿಯೂ ಇರುವದಿಲ್ಲ. ಆದ್ದರಿಂದ ಆತ್ಮನಿಗೆ ಪಂಚಭೂತಗಳ ಸಂಬಂಧವಾಗಲಿ ಅವಸ್ಥೆಗಳ ಸಂಬಂಧವಾಗಲಿ ಸ್ವಲ್ಪಮಾತ್ರವೂ ಇರುವದಿಲ್ಲ.

## ಜ್ಞಾನಕ್ಕೆ ಸಾಧನ

ಪ್ರಶ್ನೆ : ಈ ಜ್ಞಾನವನ್ನು ಬಯಸುವವರು ಯಾವ ಸಾಧನವನ್ನು ಮಾಡಬೇಕು ?

ಉತ್ತರ : ಇವರು ಬೆಳಗಾಗುತ್ತಲೂ ಎದ್ದು ತಾವು ಭೂತಗಳಿಂದಾಗಿರುವ ದೇಹೇಂದ್ರಿಯಮನಸ್ಸುಗಳೆಂದು ಅವಕ್ಕೆ ಸಂಬಂಧಪಟ್ಟ ಚಿಂತೆಯನ್ನು ಫಟ್ಟನೆ ಹತ್ತಿಸಿಕೊಳ್ಳುವ ದುರಭ್ಯಾಸವನ್ನು ಬಿಟ್ಟು ಮೇಲೆ ವಿವರಿಸಿರುವ "ಸತ್ಯಜ್ಞಾನಾನಂದಸ್ವರೂಪನಾದ ಪರಬ್ರಹ್ಮವೇ ನಾನು" ಎಂಬ ಘನತತ್ತ್ವವನ್ನು ಮನಸ್ಸಿಗೆ ತಂದುಕೊಳ್ಳಬೇಕು. ಈ ಅಭ್ಯಾಸವನ್ನು ಬಿಡದೆ ಮಾಡುವವರೇ ನಿಜವಾದ ಮುಮುಕ್ಷುಗಳು. ಮುಮುಕ್ಷುಗಳೆಂದರೆ ಭೂತಗಳ ಗುಂಪೇ ತಾವೆಂಬ ಸುಳ್ಳುಕಟ್ಟನ್ನು ಜ್ಞಾನದಿಂದ ಬಿಡಿಸಿಕೊಳ್ಳಬೇಕೆಂಬ ಬಲವಾದ ಇಚ್ಛೆಯುಳ್ಳವರು.

# ೨. ಆತ್ಮನು ಸ್ವಯಂಪ್ರಕಾಶನು

ಪ್ರಾತರ್ಭಜಾಮಿ ಮನಸೋ ವಚಸಾಮಗಮ್ಯಂ
ವಾಚೋ ವಿಭಾನ್ತಿ ನಿಖಿಲಾ ಯದನುಗ್ರಹೇಣ ।
ಯಂ ನೇತಿನೇತಿವಚನೈರ್ನಿಗಮಾ ಅವೋಚುಃ-
ಸ್ತಂ ದೇವದೇವಮಜಮಚ್ಯುತಮಾಹುರಗ್ರ್ಯಮ್ ॥೨॥

ಪ್ರತಿಪದಾರ್ಥ :- ಯದನುಗ್ರಹೇಣ- ಯಾವನ ಅನುಗ್ರಹದಿಂದ, ವಾಚಃ-ಮಾತುಗಳು, ವಿಭಾನ್ತಿ-ಬೆಳಗುತ್ತಿರುವವೋ, ಯಮ್-ಯಾವನನ್ನು, ನಿಗಮಾಃ-ವೇದಗಳು, ನೇತಿನೇತಿವಚನೈಃ-ಇದಲ್ಲ, ಇದಲ್ಲ ಎಂಬ ಮಾತುಗಳಿಂದ, ಅವೋಚುಃ-ಹೇಳಿರುವವೋ, ಮನಸಃ-ಮನಸ್ಸಿಗೂ, ವಚಸಾಮ್-ಮಾತುಗಳಿಗೂ, ಅಗಮ್ಯಮ್-ನಿಲುಕದಿರುವ, (ಆತನನ್ನು) ಪ್ರಾತಃ-ಬೆಳಗಿನಹೊತ್ತಿನಲ್ಲಿ, ಭಜಾಮಿ-ಭಜಿಸುತ್ತೇನೆ. ತಮ್-ಆತನನ್ನು, ದೇವದೇವಮ್- ದೇವತೆಗಳಿಗೆಲ್ಲ ದೇವನೆಂದೂ, ಅಜಮ್- ಜನ್ಮ ರಹಿತನೆಂದೂ, ಅಚ್ಯುತಮ್-ನಾಶವಿಲ್ಲದವನೆಂದೂ, ಅಗ್ರ್ಯಮ್-ಮೊದಲು ಇರುವವನೆಂದೂ, ಆಹುಃ-ಹೇಳುತ್ತಾರೆ.

೨. ಯಾವನ ಅನುಗ್ರಹದಿಂದಲೇ ಎಲ್ಲಾ ಮಾತುಗಳೂ ಬೆಳಗುತ್ತಿರುವವೋ, ಯಾವನನ್ನು ನಿಗಮಗಳು 'ಇದಲ್ಲ, ಇದಲ್ಲ' ಎಂಬ ವಚನಗಳಿಂದಲೇ ಹೇಳುತ್ತಿರುವವೋ, ಮಾತಿಗಾಗಲಿ ಮನಸ್ಸಿಗಾಗಲಿ ಸಿಕ್ಕದೆ ಇರುವ ಅಂಥ ಬ್ರಹ್ಮತತ್ತ್ವವನ್ನು ಪ್ರಾತಃಕಾಲದಲ್ಲಿ ಭಜಿಸುತ್ತೇನೆ. ಆತನೇ ಎಲ್ಲಾ ದೇವರುಗಳಿಗೂ ದೇವನಾಗಿರುವನು, ಜನ್ಮರಹಿತನಾಗಿರುವನು-ಎಂದು ತಿಳಿದವರು ಹೇಳುವರು.

## ಆತ್ಮನನ್ನು ವೇದಗಳು ತಿಳಿಯಿಸುವ ರೀತಿ

(ಯಂ ನೇತಿನೇತಿವಚನೈರ್ನಿಗಮಾ ಅವೋಚುಃ)

ಪ್ರಶ್ನೆ : ನಿಗಮಗಳೆಂದರೆ ಏನು ?

ಉತ್ತರ : ಆತ್ಮತತ್ತ್ವದ ರಹಸ್ಯವನ್ನು ತಿಳಿಸುವ ಉಪನಿಷತ್ತುಗಳೆಂಬ ವೇದಭಾಗಗಳನ್ನೇ ಇಲ್ಲಿ ನಿಗಮಗಳೆಂದು ಕರೆದಿದೆ. ಇವುಗಳಲ್ಲಿರುವ ಉಪದೇಶದಿಂದಲೇ ಆತ್ಮಸ್ವರೂಪವನ್ನು ಸರಿಯಾಗಿ ತಿಳಿದುಕೊಳ್ಳುವದಕ್ಕೆ ಆಗುತ್ತದೆಯಲ್ಲದೆ ಅದನ್ನು ಅರಿಯಲು ಮತ್ತೆ ಬೇರೆ ದಾರಿಯಿಲ್ಲ.

ಪ್ರಶ್ನೆ : ಈ ಉಪನಿಷತ್ತುಗಳಲ್ಲಿ ಆತ್ಮನನ್ನು ಏನೆಂದು ವರ್ಣಿಸಿರುತ್ತದೆ ?

ಉತ್ತರ : 'ಆತ್ಮತತ್ತ್ವವು ಇದಲ್ಲ, ಇದಲ್ಲ' ಎಂದು ವರ್ಣಿಸಿರುತ್ತದೆ.

ಪ್ರಶ್ನೆ : ಆತ್ಮತತ್ತ್ವವು ಇಂಥದ್ದೆಂದು ವರ್ಣಿಸದೆ ಹೀಗೆ ವಿಲಕ್ಷಣ ರೀತಿಯಿಂದ ವರ್ಣಿಸಿದರೆ ಏನು ಪ್ರಯೋಜನ ?

ಉತ್ತರ : ಆತ್ಮತತ್ತ್ವವನ್ನು ಇಂಥದ್ದೆಂದು ವರ್ಣಿಸುವದಕ್ಕೆ ಆಗದಿರುವದರಿಂದ ಅದನ್ನು ತಿಳಿಸುವದಕ್ಕೆ ಈ ಮಾರ್ಗವೇ ಸರಿ. ಇದರಿಂದ ಪ್ರಯೋಜನವೂ ಇಲ್ಲದೆ ಇಲ್ಲ.

## ಆತ್ಮನು ಮನಸ್ಸಿಗಾಗಲಿ ಮಾತಿಗಾಗಲಿ ವಿಷಯನಲ್ಲ, ಮನಸ್ಸೂ ಮಾತೂ ಆವನಿಂದಲೇ ಬೆಳಗುತ್ತವೆ

(ಮನಸೋ ವಚಸಾಮುಗವ್ಯ ವಾಚೋ ವಿಭಾನ್ತಿ ನಿಖಿಲಾ ಯದನುಗ್ರಹೇಣ)

ಪ್ರಶ್ನೆ : ಇಂಥದ್ದೆಂದು ಏಕೆ ವರ್ಣಿಸಬಾರದು ?

ಉತ್ತರ : ಆದಾಗದು. ಏಕೆಂದರೆ ಮಾತುಗಳು ತಾನೇ ಬೆಳಗುವ ಸ್ವಭಾವವಿರುವವಲ್ಲ ; ತಾನೇ ಬೆಳಗುವ ಸ್ವಭಾವವಿರುವ ವಸ್ತುವಿಗೆ ಸ್ವಯಂಪ್ರಕಾಶವೆಂದು ಹೆಸರು. ಸ್ವಯಂಪ್ರಕಾಶನಾದ ಆತ್ಮನು ಈ ಮಾತುಗಳನ್ನೆಲ್ಲ ವಿಷಯವಾಗಿ ಮಾಡಿಕೊಂಡು ಬೆಳಗುತ್ತಾನೆಂದು ಹಿಂದೆಯೇ ತೋರಿಸಿರುತ್ತದೆ. ಇದರಂತೆ ಮನಸ್ಸನ್ನು ಬೆಳಗುವವನೂ ಆತ್ಮನೇ. ಯಾವದು ಯಾವದರ ಅನುಗ್ರಹದಿಂದ ಬೆಳಗುವದೋ ಅದು ಆ ಅನುಗ್ರಹಿಸುವ ಪದಾರ್ಥವನ್ನು ಬೆಳಗಿಸಲಾರದು. ದೀಪದ ಅನುಗ್ರಹದಿಂದ ಮನೆಯಲ್ಲಿ ತೋರುವ ಉಳಿದ ಪದಾರ್ಥಗಳು ದೀಪವನ್ನು ತೋರಿಸಿಕೊಡುವದಕ್ಕೆ ಸಹಾಯಕವಾಗಲಾರವು.

ಇದರಂತೆ ಆತ್ಮನ ಅನುಗ್ರಹದಿಂದ ತೋರುವ ಮನಸ್ಸಾಗಲಿ ಮಾತುಗಳಾಗಲಿ ಆತ್ಮನನ್ನು ತೋರಿಸಲು ಸಹಾಯಕವಾಗಲಾರವು.

ಪ್ರಶ್ನೆ : ಹಾಗಿದ್ದರೆ ಉಪನಿಷದ್ವಾಕ್ಯಗಳಿಂದಲೇ ಆತ್ಮನನ್ನು ಅರಿಯು ವದಕ್ಕಾಗುತ್ತದೆ ಎಂದು ತಾವು ಹೇಳಿದ ಮಾತಿಗೆ ಅರ್ಥವೇನಾಯಿತು ? ಯಾವಾಗ ವೇದಾಂತದ ಮಾತುಗಳಿಂದ ಆತ್ಮನನ್ನು ವರ್ಣಿಸುವದಕ್ಕೆ ಆಗ ಲಿಲ್ಲವೋ ಆಗ ವೇದಾಂತವಾಕ್ಯವು ಆತ್ಮತತ್ತ್ವವನ್ನು ಅರಿಯುವದಕ್ಕೆ ಪ್ರಮಾಣವೆಂಬುದು ಹೇಗೆ ಸರಿಯಾದೀತು ?

ಉತ್ತರ : ಪ್ರಮಾಣವೆಂದರೆ ಪ್ರಮೆಗೆ ಸಾಧನವಾದದ್ದು; ಪ್ರಮೆ ಯೆಂದರೆ ಯಥಾರ್ಥವಾದ ತಿಳಿವಳಿಕೆ ; ವೇದಾಂತವಾಕ್ಯಗಳು ಆತ್ಮತತ್ತ್ವ ವನ್ನು ಅದು ಇರುವಂತೆಯೇ ತಿಳಿಸಿಕೊಡುವದರಿಂದ ಪ್ರಮಾಣವಾಗಿರುತ್ತವೆ. ಪದಾರ್ಥವನ್ನು ತಿಳಿಸುವದಕ್ಕೆ ಇಂಥದ್ದೆಂದು ವರ್ಣಿಸುವದೊಂದೇ ಉಪಾಯ ವಲ್ಲ ; ಯಾವದಾದರೊಂದು ರೀತಿಯಿಂದ ವಸ್ತುವನ್ನು ಇದ್ದದ್ದು ಇದ್ದ ಹಾಗೆಯೇ ತಿಳಿಯುವಂತೆ ಮಾಡಿದರೆ ಸಾಕು. "ಕಪ್ಪಾಗಿಯೂ ದೊಡ್ಡ ದಾಗಿಯೂ ಸುವಾಸನೆಯುಳ್ಳದ್ದಾಗಿಯೂ ಇರುವದೇ ಕಸ್ತೂರಿ" ಎಂದು ಹೇಳಿದರೆ ಕಸ್ತೂರಿಯ ಈ ವರ್ಣನೆಯಿಂದ ಅದರ ಜ್ಞಾನವಾಗುತ್ತದೆ. ಇಲ್ಲಿ ವರ್ಣಿಸಿದ ಧರ್ಮಗಳು ಕಸ್ತೂರಿಗೆ ಸೇರಿರುತ್ತವೆ. ಆದರೆ "ಯಾವ ಮನೆಯಮೇಲೆ ಕಾಗೆಯು ಹಾರಾಡುತ್ತಿರುವದೋ ಅದೇ ದೇವದತ್ತನ ಮನೆ" ಎಂದರೆ ದೇವದತ್ತನ ಮನೆಯು ಗೊತ್ತಾಗುವದಷ್ಟೆ ; ಅಲ್ಲಿ ಕಾಗೆ ಹಾರಾಡುವ ದೆಂಬುದು ಮನೆಯ ಧರ್ಮವಲ್ಲ, ಬರಿಯ ಉಪಲಕ್ಷಣ, ಎಂದರೆ ಅದನ್ನು ತೋರಿಸುವ ಗುರುತು. ಯಾವ ವಸ್ತುವಿಗೆ ಇಂಥಿಂಥ ಧರ್ಮಗಳಿರುವವೆಂದು ಹೇಳಬಹುದೋ ಅಂಥ ವಸ್ತುವನ್ನು ತಿಳಿಸಿಕೊಡುವದಕ್ಕೆ "ಹೀಗೆ ಹೀಗೆ ಇರುತ್ತದೆ" ಎಂದು ವಿಶೇಷಣಗಳನ್ನು ಜೋಡಿಸಿ ವರ್ಣಿಸಬಹುದು ; ಆದರೆ ಯಾವ ವಸ್ತುವಿಗೆ ಯಾವ ಧರ್ಮವೂ ಇಲ್ಲವೋ ಅದನ್ನು ಹಾಗೆ ವರ್ಣಿಸುವ ದಕ್ಕಾಗುವದಿಲ್ಲ. ಆತ್ಮತತ್ತ್ವಕ್ಕೆ ಯಾವ ಧರ್ಮವೂ ಇಲ್ಲ. ಆದ್ದರಿಂದ ಅದು ನಿರ್ಗುಣ, ಯಾವ ಗುಣವೂ ಇಲ್ಲದ್ದು – ಎಂದು ತಿಳಿಸುವದಕ್ಕಾಗಿ ಗುಣವಿರುವ ಯಾವ ವಸ್ತುವೂ ಅದಲ್ಲವೆಂದು ಹೇಳಬೇಕಾಯಿತು. ಆದ್ದ ರಿಂದಲೇ ಉಪನಿಷತ್ತುಗಳು 'ಇದಲ್ಲ, ಇದಲ್ಲ' ಎಂದು ಹೇಳುತ್ತವೆ. "ಅದು

ದಪ್ಪವಲ್ಲ, ಸಣ್ಣದಲ್ಲ, ಮೋಟಕಲ್ಲ, ಉದ್ದವಲ್ಲ" ಎಂದುಮುಂತಾಗಿ ವರ್ಣಿಸುವ ಶ್ರುತಿವಾಕ್ಯಗಳಿಗೆ ಇದೇ ತಾತ್ಪರ್ಯ.

## ಆತ್ಮನು ದೇವದೇವನು, ಅಜನು, ಅಚ್ಯುತನು

(ತಂ ದೇವದೇವಮಜಮಚ್ಯುತಮಾಹುರಗ್ರ್ಯಮ್)

ಪ್ರಶ್ನೆ : ಯಾವದೂ ಅಲ್ಲವೆಂದರೆ ಇಂಥದ್ದೆಂದು ಗೊತ್ತಾಗುವ ಬಗೆ ಹೇಗೆ ?

ಉತ್ತರ : ಇದಕ್ಕೆ ಮೊದಲೇ (ಪು. ೪-೧೯) ಉತ್ತರವನ್ನು ಹೇಳಿದೆ. ಯಾವದು ಸ್ವಯಂಪ್ರಕಾಶವೋ ಅದನ್ನು ತಿಳಿಯಪಡಿಸುವದಕ್ಕೆ ಮತ್ತೊಂದು ಬೇಡ. ಆತ್ಮನೆಂದರೆ ನಮ್ಮ ಸ್ವರೂಪವು ; ಅದು ಚಿದ್ರೂಪವಾಗಿರುವದರಿಂದ ಸ್ವಯಂಪ್ರಕಾಶವಾಗಿರುತ್ತದೆ. ಆದ್ದರಿಂದ ಅದು ದೇಹವೇ ಮುಂತಾದ ಅನಾತ್ಮವಸ್ತುಗಳಲ್ಲವೆಂದು ಹೇಳಿದರೆ ಸಾಕು ; ಅದರ ಸ್ವರೂಪವು ತಾನೇ ಸಿದ್ಧವಾಗಿರುತ್ತದೆ. ಆದ್ದರಿಂದ ಇದನ್ನು ದೇವದೇವ ಎಂದು ಕರೆಯುತ್ತಾರೆ. ದೇವ ಎಂದರೆ ಪ್ರಕಾಶಿಸುವ ವಸ್ತು. ಇಂದ್ರಿಯವೇ ಮುಂತಾದವುಗಳಲ್ಲಿಯೂ ಜ್ಞಾನರೂಪವಾದ ಪ್ರಕಾಶವು ಇದ್ದೇ ಇರುವದು. ಆದರೂ ಅವುಗಳ ಪ್ರಕಾಶವೆಲ್ಲ ಚಿದ್ರೂಪನಾದ ಆತ್ಮನದೇ. ಆದ್ದರಿಂದ ಆತ್ಮನು ದೇವದೇವನು, ಎಂದರೆ ಪ್ರಕಾಶಿಸುವ ಇಂದ್ರಿಯವೇ ಮೊದಲಾದವುಗಳನ್ನೆಲ್ಲ ಪ್ರಕಾಶಿಸುವವನು ಎನಿಸುವನು. ಈ ಅಭಿಪ್ರಾಯವನ್ನು ವಿಶದಪಡಿಸುವದಕ್ಕೆ ಭೌತಿಕಶಾಸ್ತ್ರದಿಂದ ಒಂದು ದೃಷ್ಟಾಂತವನ್ನು ತೆಗೆದುಕೊಳ್ಳಬಹುದು. ಚಂದ್ರನು ತನ್ನ ಸ್ವಂತಕಿರಣಗಳಿಂದ ಬೆಳಗುತ್ತಿರುವನೆಂದು ನಾವೆಲ್ಲರೂ ನಂಬಿದ್ದೇವಷ್ಟೆ. ಆದರೆ ಭೌತಿಕಶಾಸ್ತ್ರಜ್ಞರು ಚಂದ್ರನಿಗೆ ನಿಜವಾಗಿ ಸ್ವಂತಕಿರಣಗಳಿಲ್ಲವೆಂತಲೂ ಸೂರ್ಯನ ಕಿರಣಗಳು ಚಂದ್ರನಮೇಲೆ ಬಿದ್ದು ಪ್ರತಿಫಲಿಸುವದರಿಂದ ಈ ಕಿರಣಗಳು ಏರ್ಪಡುವವೆಂತಲೂ ನಿರ್ಧರಿಸಿರುತ್ತಾರೆ. ಇಲ್ಲಿ ಜನರ ದೃಷ್ಟಿಯಿಂದ ಚಂದ್ರನೂ ಬೆಳಗುವವನೇ, ಸೂರ್ಯನೂ ಬೆಳಗುವವನೇ. ಶಾಸ್ತ್ರಜ್ಞರ ದೃಷ್ಟಿಯಲ್ಲಿಯೋ ಎಂದರೆ, ಸೂರ್ಯನು ಮತ್ತೊಂದರ ಸಹಾಯವಿಲ್ಲದೆಯೇ ಬೆಳಗುವವನು ; ಜನರ ದೃಷ್ಟಿಯಿಂದ ಬೆಳಗುವ ಚಂದ್ರನನ್ನು ಬೆಳಗುವವನೂ ಇವನೇ. ಇದರಂತೆ ಸಾಮಾನ್ಯಜನರ ದೃಷ್ಟಿಯಿಂದ ಮನಸ್ಸು,

ಇಂದ್ರಿಯ–ಇವುಗಳಲ್ಲಿ ಜ್ಞಾನರೂಪವಾದ ಬೆಳಕು ಇರುತ್ತಿರುವದು. ಆತ್ಮನಲ್ಲಿಯೋ ಎಂದರೆ ಪರಮಾರ್ಥವಾಗಿ ಬೆಳಕು ಇದ್ದುಕೊಂಡು, ಯಾವ ಮನಸ್ಸೂ ಇಂದ್ರಿಯಗಳೂ ತಾವೇ ಬೆಳಗುತ್ತಿರುವವೆಂದು ಜನರು ನಂಬಿರುವರೋ ಅವನ್ನೂ ಬೆಳಗುತ್ತಿರುವದು. ಆದ್ದರಿಂದ ಆತ್ಮನು ದೇವದೇವನು.

ಪ್ರಶ್ನೆ : ಆತ್ಮನ ಈ ಬೆಳಕು ಹುಟ್ಟಿದ್ದೆಂದು ?

ಉತ್ತರ : ಇದು ಅಜ, ಹುಟ್ಟನ್ನೇ ಅರಿಯದು. ಇದು ಹುಟ್ಟಿದ್ದರೆ ನಾಶವಾಗಬೇಕಾಗಿತ್ತು. ಹುಟ್ಟನ್ನಾಗಲಿ ನಾಶವನ್ನಾಗಲಿ ಯಾವ ಸಾಕ್ಷಿಯೂ ಇಲ್ಲದೆಇದ್ದರೆ ನಂಬುವದಕ್ಕಾಗುವದಿಲ್ಲವಾದ್ದರಿಂದಲೂ ಅಂಥ ಸಾಕ್ಷಿಯಿದ್ದರೆ ಅದೇ ಎಲ್ಲವನ್ನೂ ನೋಡುವ ಆತ್ಮನಾಗುವದರಿಂದಲೂ ಈ ಆತ್ಮನು ಜನ್ಮರಹಿತನು, ನಾಶವಿಲ್ಲದವನು, ಎಲ್ಲದಕ್ಕೂ ಮೊದಲೇ ಇದ್ದುಕೊಂಡಿರುವ ಸ್ವತಃಸಿದ್ಧನು–ಎಂದು ಬಲ್ಲವರು ಹೇಳುತ್ತಾರೆ.

ಪ್ರಶ್ನೆ : ಒಂದನೆಯ ಶ್ಲೋಕದ ವಿವರಣೆಯಲ್ಲಿ (ಪು. ೧೫) ಆತ್ಮನ ಸ್ವರೂಪವು ಸಚ್ಚಿದಾನಂದಸ್ವರೂಪವೆಂದು ನಿರ್ಣಯಮಾಡಿದಿರಿ. ಈ ಶ್ಲೋಕದ ವಿವರಣೆಯಲ್ಲಿಯೋ ಎಂದರೆ ಆತ್ಮನಿಗೆ ಯಾವ ಧರ್ಮವೂ ಇಲ್ಲವಾದ್ದರಿಂದ ಉಪನಿಷತ್ತುಗಳು ಇದನ್ನು "ನೇತಿ, ನೇತಿ" ( ಇದಲ್ಲ, ಇದಲ್ಲ ) ಎಂದು ಹೇಳುತ್ತವೆ ಎಂತ ತಿಳಿಸಿರುತ್ತೀರಿ. ಇದು ಒಂದಕ್ಕೊಂದು ವಿರುದ್ಧವಾಗಲಿಲ್ಲವೆ ?

ಉತ್ತರ : ಆಗಲಿಲ್ಲ. ಸಚ್ಚಿದಾನಂದರೂಪವೆಂದರೆ ಇಂಥಿಂಥ ಧರ್ಮಗಳುಳ್ಳದ್ದೆಂದು ಅಭಿಪ್ರಾಯವಲ್ಲ. "ಸತ್" ಎಂದರೆ ಅನಾತ್ಮದಂತೆ ಹುಸಿಯಲ್ಲವೆಂದರ್ಥ ; 'ಚಿತ್' ಎಂದರೆ ಮತ್ತೊಂದರಿಂದ ಬೆಳಗುವದಲ್ಲವೆಂದರ್ಥ ; 'ಆನಂದ' ಎಂದರೆ ದುಃಖರೂಪವಲ್ಲ ಎಂದರ್ಥ. ಹೀಗೆ ಸಚ್ಚಿದಾನಂದಶಬ್ದವು ಇಂಥಿಂಥ ಅನಾತ್ಮಧರ್ಮಗಳು ಆತ್ಮನವಲ್ಲವೆಂದು ಹೇಳುವದಕ್ಕೆ ಉಪಯೋಗಿಸಿದ್ದೇ ಹೊರತು ಇಂಥಿಂಥ ವಿಶೇಷರೂಪವು ಆತ್ಮನಲ್ಲಿರುವದೆಂದು ಹೇಳುವದಕ್ಕಲ್ಲ. ಸರಿಯಾಗಿ ನೋಡಿದರೆ ಆತ್ಮನಲ್ಲಿ ಅಸದ್ರೂಪವೂ ಇಲ್ಲ, ಸದ್ರೂಪವೂ ಇಲ್ಲ ; ಅಚಿದ್ರೂಪವೂ ಇಲ್ಲ. ಚಿದ್ರೂಪವೂ ಇಲ್ಲ ; ದುಃಖರೂಪವೂ ಇಲ್ಲ, ಆನಂದರೂಪವೂ ಇಲ್ಲ. ಆದ್ದರಿಂದಲೇ ಆತ್ಮನು ನಿರ್ವಿಶೇಷನು ಎಂದರೆ ಯಾವ ವಿಶೇಷರೂಪವೂ ಇಲ್ಲದವನು–ಎಂದು ವೇದಾಂತಿಗಳು ಹೇಳುತ್ತಾರೆ.

# ಆತ್ಮನನ್ನೇ ಭಜಿಸಬೇಕು

(ಪ್ರಾರ್ಥಜಾವಿ)

ಪ್ರಶ್ನೆ: ಈ ಅಭಿಪ್ರಾಯವು ಮನಸ್ಸಿನಲ್ಲಿ ನಿಲ್ಲಬೇಕಾದರೆ ಏನು ಮಾಡಬೇಕು ?

ಉತ್ತರ: ಹಿಂದಿನ ಶ್ಲೋಕದ ವಿವರಣೆಯಲ್ಲಿ ಹೇಳಿರುವಂತೆ ಬೆಳಗಾಗುತ್ತಲೂ ಎದ್ದು ಆತ್ಮತತ್ತ್ವವನ್ನು ಮನಸ್ಸಿಗೆ ತಂದುಕೊಳ್ಳಬೇಕು. ಹೀಗೆ ಅದನ್ನು ನೆನೆಸಿಕೊಂಡಾಗಲೂ ಬಹುದಿನದ ವಾಸನೆಯಿಂದ ಅನಾತ್ಮದ ವಿಚಾರಗಳೇ ಮತ್ತೂ ಬಂದುಬಿಡುವದುಂಟು. ಅದಕ್ಕೆ ಅವಕಾಶವನ್ನು ಕೊಡದಹಾಗೆ ನೆನಪಿಗೆ ಬಂದ ಆತ್ಮತತ್ತ್ವವನ್ನೇ ಭಜಿಸುತ್ತಿರಬೇಕು. ಭಜಿಸುವದೆಂದರೆ ಭಕ್ತಿಯಿಂದ ಸೇವೆಮಾಡುತ್ತಿರುವದು. ಲೋಕದಲ್ಲಿ ನಮಗೆ ಬೇಕಾದ ಯಾವದಾದರೊಂದು ಪದಾರ್ಥದ ನೆನಪು ಬಂದರೆ ಅದನ್ನು ಸಂಪಾದಿಸಬೇಕೆಂಬ ಕುತೂಹಲವು ಹೆಚ್ಚಿ ಅದು ಸಿಕ್ಕುವವರೆಗೂ ಅದನ್ನು ದೊರಕಿಸಿಕೊಳ್ಳುವ ಯೋಚನೆಯಲ್ಲಿಯೇ ಇರುವೆವು. ಆಗ ನಮಗೆ ಮತ್ತೆ ಯಾವ ವಸ್ತುವೂ ಬೇಡವಾಗಿರುತ್ತದೆ. ಅದು ನಮಗೆ ಸಿಕ್ಕಿದಾಗಲಂತೂ ಅದರಲ್ಲಿ ಹೆಚ್ಚಿನ ಪ್ರೀತಿಯುಂಟಾಗುತ್ತದೆ, ಅಲ್ಲವೆ ? ಇದರಂತೆಯೇ ಆತ್ಮತತ್ತ್ವವು ನೆನಪಿಗೆ ಬಂದೊಡನೆ ಅದನ್ನೇ ನಮ್ಮದನ್ನಾಗಿ ಮಾಡಿಕೊಂಡುಬಿಡಬೇಕೆಂಬ ಕುತೂಹಲವನ್ನು ಹೆಚ್ಚಿಸಿಕೊಳ್ಳಬೇಕು, ಅದನ್ನು ಪಡೆದುಕೊಂಡು ಅದರಲ್ಲಿಯೇ ಪ್ರೇಮವನ್ನು ಮಾಡಬೇಕು. ಈ ಅಭಿಪ್ರಾಯದಿಂದಲೇ ಬೆಳಗಿನ ಹೊತ್ತಿನಲ್ಲಿ ಆತ್ಮನನ್ನು ಪ್ರಯತ್ನಪೂರ್ವಕವಾಗಿ ಸ್ಮರಣೆಗೆ ತಂದುಕೊಳ್ಳಬೇಕು. ಆಮೇಲೆ ಮಿಕ್ಕದ್ದರಲ್ಲಿ ಯಾವ ರಾಗವೂ ಇಲ್ಲದೆ ಆ ತತ್ತ್ವವನ್ನೇ ಆದರಪೂರ್ವಕವಾಗಿ ಭಜಿಸಬೇಕು-ಎಂದು ಹೇಳಿರುತ್ತದೆ.

ಪ್ರಾತರ್ನಮಾಮಿ ತಮಸಃ ಪರಮರ್ಕವರ್ಣಂ
ಪೂರ್ಣಂ ಸನಾತನಪದಂ ಪುರುಷೋತ್ತಮಾಖ್ಯಮ್ ।
ಯಸ್ಮಿನ್ನಿದಂ ಜಗದಶೇಷಮಶೇಷಮೂರ್ತೌ
ರಜ್ಜ್ವಾಂ ಭುಜಙ್ಗಮ ಇವ ಪ್ರತಿಭಾತಿ ತಂ ವೈ ॥ ೩ ॥

ಪ್ರತಿಪದಾರ್ಥ :– ಯಸ್ಮಿನ್–ಯಾವ, ಅಶೇಷಮೂರ್ತೌ–ಸರ್ವರೂಪನಲ್ಲಿ, ಇದಂ–ಈ, ಅಶೇಷಮ್ – ಎಲ್ಲಾ, ಜಗತ್ತು – ಜಗತ್, ರಜ್ಜ್ವಾಮ್ – ಹಗ್ಗದಲ್ಲಿ, ಭುಜಙ್ಗಮ ಇವ – ಹಾವಿನಂತೆ, ಪ್ರತಿಭಾತಿ – ತೋರುತ್ತಿರುವದೋ, ತಂ ವೈ – ಆ ಪ್ರಸಿದ್ಧನಾದ, ತಮಸಃ – ಕತ್ತಲೆಗೆ, ಪರಮ್ – ಆಚೆಯಿರುವ, ಅರ್ಕವರ್ಣಮ್ – ಸೂರ್ಯವರ್ಣದ, ಪೂರ್ಣಮ್ – ತುಂಬಿರುವ, ಸನಾತನಪದಮ್ – ಶಾಶ್ವತಸ್ಥಾನವಾಗಿರುವ, ಪುರುಷೋತ್ತಮಾಖ್ಯಮ್ – ಪುರುಷೋತ್ತಮನೆಂಬ ಹೆಸರುಳ್ಳಾತನನ್ನು, ಪ್ರಾತಃ– ಬೆಳಗಿನಹೊತ್ತು, ನಮಾಮಿ – ನಮಸ್ಕರಿಸುತ್ತೇನೆ.

೩. ಸರ್ವರೂಪನಾದ ಯಾವಾತನಲ್ಲಿ ಈ ಜಗತ್ತೆಲ್ಲವೂ ಹಗ್ಗದಲ್ಲಿ ಹಾವು ತೋರುವ ಹಾಗೆ ತೋರುತ್ತಿರುವದೋ, ತಮಸ್ಸಿಗೆ ದೂರನಾಗಿ ಸೂರ್ಯವರ್ಣನಾಗಿರುವ ಪೂರ್ಣನಾದ, ಸನಾತನಪದವೆಂದು ಪ್ರಸಿದ್ಧನಾಗಿರುವ, ಪುರುಷೋತ್ತಮನೆಂಬ ಹೆಸರುಳ್ಳ ಆ ಸುಪ್ರಸಿದ್ಧವಾದ ಆತ್ಮತತ್ತ್ವಕ್ಕೆ ಪ್ರಾತಃಕಾಲದಲ್ಲಿ ನಮಸ್ಕಾರವನ್ನು ಮಾಡುತ್ತೇನೆ.

## ಅನಾತ್ಮವೆಂಬುದೂ ಆತ್ಮನೇ
(ಅಶೇಷಮೂರ್ತೌ)

ಪ್ರಶ್ನೆ : ಆತ್ಮತತ್ತ್ವವನ್ನು ಬಿಟ್ಟರೆ ಸಿಕ್ಕದ್ದೆಲ್ಲವೂ ಅನಾತ್ಮವೆಂದೂ ಈ ಅನಾತ್ಮವು ಆತ್ಮನಿಗೆ ಸಂಬಂಧಪಟ್ಟದ್ದಲ್ಲವೆಂದೂ ಹಿಂದೆ ಹೇಳಿದಿರಿ. ಹಾಗಾದರೆ ಈ ಅನಾತ್ಮವು ಯಾವದಕ್ಕೆ ಸೇರಿದ್ದು ?

ಉತ್ತರ : ಇದೂ ಆತ್ಮನಿಗೇ ಸೇರಿದ್ದು. ಏಕೆಂದರೆ ಆತ್ಮನಿಗಿಂತ ಬೇರೆಯಾದದ್ದು ಯಾವದೂ ಇರುವದೇ ಇಲ್ಲ.

ಪ್ರಶ್ನೆ : ಇದು ಆತ್ಮನಿಗೆ ಸೇರಿಯೂ ಸೇರದೆಯೂ ಇರುವದು ಹೇಗೆ ?

ಉತ್ತರ : ನಿಜವಾಗಿ ಸೇರಿಲ್ಲವೆಂದು ನಾವು ಹಿಂದೆ ಹೇಳಿರುತ್ತೇವೆ. ಆದರೆ ವಿಚಾರಮಾಡದೆ ಇರುವ ಅಜ್ಞಾನಿಗಳ ದೃಷ್ಟಿಗೆ ಈ ಜಗತ್ತೆಲ್ಲವೂ ಆತ್ಮನಿಗೆ ಸೇರಿದ್ದೆಂದೇ ತೋರುತ್ತಿರುವದು.

ಪ್ರಶ್ನೆ : ಹೀಗೆ ತೋರುತ್ತಿರುವದಕ್ಕೆ ಕಾರಣವೇನು ?

ಉತ್ತರ : ವಿಚಾರಮಾಡಿ ಆತ್ಮಸ್ವರೂಪವನ್ನು ನಿಶ್ಚಯಿಸಿಕೊಳ್ಳದಿರುವದೇ ಕಾರಣ.

ಪ್ರಶ್ನೆ : ವಿಚಾರಿಸಿ ನಿಶ್ಚಯಿಸಿಕೊಳ್ಳದಿದ್ದಮಾತ್ರಕ್ಕೆ ಇಲ್ಲದಿದ್ದ ವಸ್ತು ತೋರಬೇಕೆ ?

ಉತ್ತರ : ಇಲ್ಲದ ವಸ್ತು ತೋರುವದೆಂದು ಯಾರು ಹೇಳಿದರು ? ಇರುವ ಆತ್ಮತತ್ತ್ವವೇ ವಿಚಾರಮಾಡದಿರುವ ಮನಸ್ಸಿಗೆ ಅನಾತ್ಮರೂಪವಾಗಿ ತೋರುತ್ತಿರುವದು. ಈ ಕಾಣುವ ಕೇಳುವ ಜಗದ್ರೂಪವೆಲ್ಲ ನಿಜವಾಗಿ ಆತ್ಮನದೇ ಎಂದು ತಿಳಿ.

## ಹಗ್ಗದ ಹಾವಿನ ದೃಷ್ಟಾಂತ

(ಯಸ್ಮಿನ್ನಿದಂ ಜಗತ್ ರಜ್ಜ್ವಾಂ ಭುಜಙ್ಗಮ ಇವ ಪ್ರತಿಭಾತಿ)

ಪ್ರಶ್ನೆ : ತಾವು ಹೇಳಿದ್ದು ನನಗೆ ಸರಿಯಾಗಿ ತಿಳಿಯಲಿಲ್ಲ. ಆತ್ಮನಲ್ಲಿ ಯಾವ ವಿಶೇಷವಾದ ಆಕಾರವೂ ಇಲ್ಲವೆಂದು ಹೇಳಿದಿರಿ. ಈಗ ಎಲ್ಲಾ ಆಕಾರಗಳೂ ಆತ್ಮನವೇ ಎಂದು ಹೇಳುತ್ತೀರಿ. ಇದು ಒಂದಕ್ಕೊಂದು ವಿರುದ್ಧವಾದ ಮಾತಲ್ಲವೆ ?

ಉತ್ತರ : ಅಲ್ಲ. ಏಕೆಂದರೆ ಆತ್ಮನಲ್ಲಿ ಯಾವ ವಿಶೇಷವೂ ಇಲ್ಲವೆಂದು ನಾವು ಹೇಳಿದ್ದು ಆತ್ಮಜ್ಞಾನಿಗಳ ದೃಷ್ಟಿಯಿಂದ. ಆತ್ಮನಲ್ಲಿ ಎಲ್ಲಾ ಆಕಾರಗಳೂ ತೋರುತ್ತಿರುವವೆಂದು ಈಗ ನಾವು ಹೇಳುತ್ತಿರುವದು ಅಜ್ಞಾನಿಗಳ ದೃಷ್ಟಿಯಿಂದ. ಆತ್ಮನಲ್ಲಿ ತೋರುವ ವಿಶೇಷವೆಂಬುದನ್ನು ಹಗ್ಗದ ಹಾವಿನ ದೃಷ್ಟಾಂತದಂತೆ ಅರಿಯಬೇಕು.

ಪ್ರಶ್ನೆ : ಆ ದೃಷ್ಟಾಂತವು ಇಲ್ಲಿ ಹೇಗೆ ಹೊಂದುತ್ತದೆ ?

ಉತ್ತರ : ಹೇಗೆಂದರೆ : ಹಗ್ಗದಲ್ಲಿ ಹಾವೆಂಬುದು ನಿಜವಾಗಿ ಎಲ್ಲಿಯೂ ಎಂದಿಗೂ ಇರುವದಿಲ್ಲ. ಆದರೂ ನಸುಗತ್ತಲೆಯಲ್ಲಿ ನೋಡುವವರಿಗೆ ಅದು ಹಾವಿನಂತೆ ಕಾಣಬರುತ್ತದೆಯಲ್ಲವೆ ? ಅಲ್ಲಿ ಹಗ್ಗವನ್ನು ಬಿಟ್ಟರೆ ಹಾವು ಎಲ್ಲಿಯೂ ಇರುವದಿಲ್ಲವಾದ್ದರಿಂದ ಹಗ್ಗವನ್ನೇ ಹಾವೆಂದು ತಿಳಿಯುತ್ತಾರೆಂಬುದು ನಿರ್ವಿವಾದವಾಗಿದೆಯಷ್ಟೆ.* ಆತ್ಮನಲ್ಲಿ ತೋರುವ ಅನಾತ್ಮದ ವಿಷಯವನ್ನೂ ಹೀಗೆಯೇ ತಿಳಿಯಬೇಕು. ನಿಜವಾಗಿ ನೋಡಿದರೆ ಆತ್ಮನಲ್ಲಿ ಅನಾತ್ಮವೆಂಬುದು ಯಾವಾಗಲೂ ಇರುವದಿಲ್ಲ, ಇರುವ ಸಂಭವವೂ ಇಲ್ಲ. ಇದನ್ನು ಹಿಂದೆ ಹೇಳಿದ ಅವಸ್ಥಾತ್ರಯದೃಷ್ಟಿಯಿಂದ ವಿಚಾರಮಾಡಿ ನಿರ್ಣಯಿಸಿಕೊಳ್ಳಬಹುದಾಗಿದೆ. ಆದರೂ ಆತ್ಮನ ನಿಜವಾದ ರೂಪವನ್ನು ನಿಶ್ಚಯಿಸಿಕೊಳ್ಳಲಾರದ ಅಜ್ಞಾನಿಗಳ ದೃಷ್ಟಿಗೆ ಆತ್ಮನೇ ಅನಾತ್ಮವಾಗಿ ತೋರುತ್ತಾನೆ. ಆದ್ದರಿಂದ ಅನಾತ್ಮವೆಂದು ತೋರುವದೂ ನಿಜವಾಗಿ ಆತ್ಮನೇ ; ತೋರುವ ಅನಾತ್ಮರೂಪವು ಮಾತ್ರ ಅಜ್ಞಾನದ ಕಾರ್ಯವೇ ಎಂದು ಏರ್ಪಡುತ್ತದೆ.

---

* ಲೌಕಿಕದೃಷ್ಟಿಯಿಂದ ನೋಡಿದರೆ ಹಗ್ಗದಲ್ಲಿ ಹಾವು ತೋರುವದೇ ಹೊರತು ನಿಜವಾಗಿ ಅಲ್ಲಿ ಹಾವಿರುವದಿಲ್ಲ – ಎಂಬುದೇ ನಿರ್ವಿವಾದವಾಗಿರುತ್ತದೆ. ಆ ದೃಷ್ಟಿಯನ್ನು ಇಟ್ಟುಕೊಂಡೇ ಇಲ್ಲಿ ವಿಚಾರಮಾಡಿರುತ್ತದೆ. ಆದರೆ ಈ ದೃಷ್ಟಾಂತವನ್ನೇ ಬಗೆಬಗೆಯಾಗಿ ವಿವರಿಸಿರುವ ವಾದಿಗಳು ಆಗಿಹೋಗಿರುತ್ತಾರೆ. ಕೆಲವರು ವೇದಾಂತಿಗಳೂ ಈ ದೃಷ್ಟಾಂತವನ್ನು ತಮ್ಮದೇ ಒಂದು ರೀತಿಯಿಂದ ವಿವರಿಸುತ್ತಾರೆ. ಈ ಬಾಲಬೋಧೆಯಲ್ಲಿ ಅವನ್ನೆಲ್ಲ ವಿವರಿಸುವದಕ್ಕೆ ಅವಕಾಶವಿರುವದಿಲ್ಲ ; ಪ್ರಕೃತಕ್ಕೆ ಅವುಗಳ ತಿಳಿವಳಿಕೆಯಿಲ್ಲದಿದ್ದರೂ ಸಾಗುತ್ತದೆ. ವಾಚಕರು ‘ವೇದಾಂತಪ್ರವೇಶಿಕೆ’ಯೇ ಮುಂತಾದ ಗ್ರಂಥಗಳಲ್ಲಿ ಹೆಚ್ಚಿನ ವಿವರವನ್ನು ಕಾಣಬಹುದು.

# ಆತ್ಮನು ಅಜ್ಞಾನದ ಸೋಂಕಿಲ್ಲದ ಚೈತನ್ಯಪ್ರಕಾಶವು

(ತಮಸಃ ಪರಮರ್ಕವರ್ಣವಮ್)

ಪ್ರಶ್ನೆ : ಆತ್ಮನಿಗಿಂತ ಬೇರೆಯಾದ ವಸ್ತುವೇ ಇಲ್ಲದ್ದರಿಂದ, ಅಜ್ಞಾನ ದಿಂದ ಅನಾತ್ಮವು ತೋರುವದೆಂಬುದಾದರೂ ಆತ್ಮನಿಗೇ ಎಂದಾಯಿತು. ಹಾಗಾದರೆ ಆತ್ಮನಿಗೆ ಅಜ್ಞಾನವುಂಟೊ ?

ಉತ್ತರ : ನಿಜ. ವಿಚಾರಮಾಡುವದಕ್ಕೆ ಪೂರ್ವದಲ್ಲಿ ಆತ್ಮನಲ್ಲಿಯೇ ಅಜ್ಞಾನವಿರುತ್ತದೆ, ಆತ್ಮನಲ್ಲಿಯೇ ಜಗತ್ತೂ ತೋರುತ್ತಿರುತ್ತದೆ. ಆದರೆ ಸರಿಯಾಗಿ ನೋಡಿದರೆ ಆತ್ಮನಲ್ಲಿ ಅಜ್ಞಾನವೂ ಇಲ್ಲ, ಜಗತ್ತೂ ತೋರುವದಿಲ್ಲ. ಆತ್ಮನು ಮಿಕ್ಕ ಅನಾತ್ಮವನ್ನು ಹೇಗೆ ವಿಷಯವಾಗಿಯೇ ಅರಿಯುತ್ತಾನೋ ಹಾಗೆಯೇ ಈ ಅಜ್ಞಾನವನ್ನೂ ವಿಷಯಮಾಡಿಕೊಂಡೇ ಅರಿಯುತ್ತಾನೆ. ಆದ್ದರಿಂದ ವಿಷಯಿಯಾದ ಆತ್ಮನಲ್ಲಿ ವಿಷಯವಾದ ಅಜ್ಞಾನವು ಒಂದಿಷ್ಟೂ ಇರುವದಿಲ್ಲವೆಂದು ಸಿದ್ಧವಾಗುತ್ತದೆ. ಆದ್ದರಿಂದಲೇ ಶ್ರುತಿಯಲ್ಲಿ "ಆತ್ಮನು ಸೂರ್ಯನ ವರ್ಣವಾಗಿರುತ್ತಾನೆ, ತಮಸ್ಸಿನ ಆಚೆ ಇರುತ್ತಾನೆ" (ಆದಿತ್ಯವರ್ಣಂ ತಮಸಃ ಪರಸ್ತಾತ್....ಶ್ವೇ. ೩-೮) ಎಂದು ಹೇಳಿದೆ.

ಪ್ರಶ್ನೆ : ತಾವು ಮೊದಲು ಆತ್ಮನಲ್ಲಿ ಯಾವ ವರ್ಣವೂ ಇಲ್ಲವೆಂದು ಹೇಳಿದಿರಲ್ಲ! ಈ ಆತ್ಮನು ಸೂರ್ಯನ ವರ್ಣದವನೆಂಬುದು ಹೇಗೆ ಸರಿಯಾದೀತು ?

ಉತ್ತರ : ನಾವು ಈಗ ಉದಾಹರಿಸಿದ ಶ್ರುತಿಯ ತಾತ್ಪರ್ಯವೇನೆಂದರೆ, ಸೂರ್ಯನಿಗೆ ಹೇಗೆ ಕತ್ತಲೆಯ ಸಂಪರ್ಕವಾಗುವ ಸಂಭವವೇ ಇಲ್ಲವೋ ಹಾಗೆ ಆತ್ಮನಿಗೆ ಅಜ್ಞಾನದ ಸಂಪರ್ಕವಾಗುವ ಸಂಭವವೇ ಇರುವದಿಲ್ಲ. ಅಜ್ಞಾನಕ್ಕೆ ತಮಸ್ಸು, ಅವಿದ್ಯೆ, ಮೋಹ, ಭ್ರಮೆ – ಮುಂತಾದ ಹೆಸರುಗಳೂ ಉಂಟು. ಸ್ವಯಂಪ್ರಕಾಶನಾದ ಈ ಆತ್ಮನೆಂಬ ಸೂರ್ಯನಿಗೆ ಅಜ್ಞಾನವೆಂಬ ತಮಸ್ಸಿನ ಸಂಬಂಧವು ಎಳ್ಳಷ್ಟೂ ಇರುವದಿಲ್ಲ. ಇದೇ ಆದಿತ್ಯವರ್ಣನೆಂಬುದರ ಅಭಿಪ್ರಾಯ.

ಪ್ರಶ್ನೆ : ಹಾಗಾದರೆ ಜಗತ್ತು ತೋರುವದಕ್ಕೆ ಅವಕಾಶವೇ ಇಲ್ಲವಲ್ಲ !

ಉತ್ತರ : ಆತ್ಮದೃಷ್ಟಿಯಿಂದ ನೋಡಿದರೆ ಇಲ್ಲವೇ ಇಲ್ಲ.

ಪ್ರಶ್ನೆ : ಆತ್ಮಜ್ಞಾನಿಗಳೆಂಬವರು ಎಷ್ಟೋ ಜನರಿರುತ್ತಾರೆ. ಅವರೂ ನಮ್ಮಂತೆಯೇ ವ್ಯವಹಾರಮಾಡುತ್ತಿರುವರಲ್ಲ ! ಅವರಿಗೆ ಈ ಜಗತ್ತು ಕಾಣಿಸದೆ ಇದ್ದರೆ ಹಾಗೆ ವ್ಯವಹಾರಮಾಡುವದಕ್ಕಾದೀತೆ ?

ಉತ್ತರ : ನಾವು ಹಿಂದೆ (೧ನೆಯ ಶ್ಲೋಕದ ವಿವರಣೆಯಲ್ಲಿ) ತಿಳಿಸಿರುವ ರೀತಿಯಿಂದ ಅವಸ್ಥಾತ್ರಯವನ್ನು ಮೀರಿದ ಶುದ್ಧಾತ್ಮದೃಷ್ಟಿಯಿಂದ ನೋಡಿದಾಗ ಅನೇಕ ಜ್ಞಾನಿಗಳಾಗಲಿ ಅಜ್ಞಾನಿಗಳಾಗಲಿ ವ್ಯವಹಾರಮಾಡುತ್ತಿರುವದೂ ಆತ್ಮನಿಗಿಂತ ವ್ಯತಿರಿಕ್ತವಾದ ದೇಹೇಂದ್ರಿಯಮನೋವಿಷಯಗಳು ಯಾವದೂ ಎಲ್ಲಿಯೂ ಕಾಣುವದಿಲ್ಲ. ಅವಿದ್ಯಾತಿಮಿರರೋಗದಿಂದ ಕುರುಡರಾಗಿರುವವರಿಗೆ ಮಾತ್ರ ಇದೆಲ್ಲವೂ ಯಾವಾಗಲೂ ತೋರುತ್ತಿರುವದು. ಆದ್ದರಿಂದ ಇದರಲ್ಲಿ ಯಾವ ವಿರೋಧವೂ ಇಲ್ಲ.

## ಆತ್ಮನು ಪೂರ್ಣನು, ಸನಾತನನು, ಪುರುಷೋತ್ತಮನು.

(ಪೂರ್ಣಂ, ಸನಾತನಪದಂ, ಪುರುಷೋತ್ತಮಾಖ್ಯಮ್)

ಪ್ರಶ್ನೆ : ಈ ಆತ್ಮತತ್ತ್ವವೆಂಬುದು ಯಾವಯಾವಾಗ ಎಲ್ಲೆಲ್ಲಿ ಹೇಗೆ ಹೇಗೆ ಇರುತ್ತದೆ ?

ಉತ್ತರ : ಇದು ಯಾವಾಗಲೂ ಎಲ್ಲೆಲ್ಲಿಯೂ ಒಂದೇ ರೂಪದಿಂದಿರುವದು. ಇದಕ್ಕೇ ಪುರುಷೋತ್ತಮನೆಂದು ಹೆಸರು.

ಪ್ರಶ್ನೆ : ಈ ಅಭಿಪ್ರಾಯವನ್ನು ದಯವಿಟ್ಟು ಪೂರ್ಣವಾಗಿ ವಿವರಿಸಬೇಕು.

ಉತ್ತರ : ಇದು ಸನಾತನವಾದದ್ದು, ಎಂದರೆ ಶಾಶ್ವತವಾದದ್ದು ; ಏಕೆಂದರೆ ಇದಕ್ಕೆ ಕಾಲದಿಂದಾಗುವ ಯಾವ ಕಟ್ಟೂ ಇರುವದಿಲ್ಲ. ಕಾರ್ಯವಾದದ್ದೆಲ್ಲವೂ ಕಾಲಕ್ಕೆ ಕಟ್ಟುಬಿದ್ದಿರುತ್ತದೆ ; ಆದರೆ ಆತ್ಮನು ಕಾರ್ಯವಲ್ಲ,

ಕಾಲವು ಕೂಡ ಆತ್ಮನಿಗಿಂತ ಬೇರೆಯಾಗಿ ಇರುವದೇ ಇಲ್ಲ. ಆದ್ದರಿಂದ ಆತ್ಮನು ಕಾಲದ ಕಟ್ಟಿಲ್ಲದವನು, ಸನಾತನನು. ಈ ಆತ್ಮತತ್ತ್ವವು ಪೂರ್ಣವಾದದ್ದು : ಏಕೆಂದರೆ ಇದಕ್ಕೆ ದೇಶದಿಂದಾಗುವ ಯಾವ ಕಟ್ಟೂ ಇರುವದಿಲ್ಲ. ದೇಶವೆಂದರೆ ಆಕಾಶದಲ್ಲಿ ಅಲ್ಲಿ, ಇಲ್ಲಿ – ಎಂಬ ವ್ಯವಹಾರಕ್ಕೆ ಕಾರಣವಾಗಿರುವ ಸ್ಥಲವು. ಆದರೆ ಆಕಾಶವೆಂಬುದು ಕೂಡ ಆತ್ಮನಿಗಿಂತ ಬೇರೆಯಿರುವದಿಲ್ಲ. ಆದ್ದರಿಂದ ಆತ್ಮನು ಪೂರ್ಣನು, ದೇಶಕೃತವಾದ ಅಳತೆಯಿಲ್ಲದವನು. ಇದು ಪುರುಷೋತ್ತಮನು, ಏಕೆಂದರೆ ತನಗೆ ಎರಡನೆಯದೆನಿಸುವ ಯಾವದೊಂದರ ಎಲ್ಲೆಕಟ್ಟೂ ಇದಕ್ಕೆ ಇರುವದಿಲ್ಲ.

ಪ್ರಶ್ನೆ : ವಸ್ತುವಿನಿಂದಾಗುವ ಎಲ್ಲೆಕಟ್ಟು ಇಲ್ಲದಮಾತ್ರಕ್ಕೆ ಪುರುಷೋತ್ತಮನೆಂದು ಏಕೆ ಹೆಸರಾಗಬೇಕು ?

ಉತ್ತರ : ಹೇಳುತ್ತೇನೆ ಕೇಳು : ಜಾಗ್ರತ್ಸ್ವಪ್ನಗಳಲ್ಲಿ ತೋರುವದೆಲ್ಲವೂ ಕ್ಷರವೆನಿಸುವದು ; ಏಕೆಂದರೆ ಇದು ನಾಶವಾಗತಕ್ಕದ್ದು. ಆದರೆ ಕ್ಷರವೆನಿಸಿರುವ ಯಾವದು ನಾಶವಾದರೂ ಅದರ ಬೀಜವೊಂದು ಇದ್ದೇ ಇರುತ್ತದೆ. ಸುಷುಪ್ತಿಪ್ರಲಯಗಳಲ್ಲಿಕೂಡ ಆ ಬೀಜವಿರುತ್ತದೆ ಎಂದು ಜನರು ಭಾವಿಸಿರುತ್ತಾರೆ. ಸರಿಯಾಗಿ ನೋಡಿದರೆ ನಾವು ಹಿಂದೆ ತೋರಿಸಿರುವಂತೆ ಸುಷುಪ್ತಿಯಲ್ಲಿ ಯಾವ ಅನಾತ್ಮವಸ್ತುವೂ ಇರುವದಿಲ್ಲವೆಂಬುದೇ ಯುಕ್ತ. ಆದರೂ ಜನರು "ಸುಷುಪ್ತಿಪ್ರಲಯಗಳಲ್ಲಿ ಈ ಜಗತ್ತು ಬೀಜರೂಪವಾಗಿ ಇರಲೇಬೇಕು ; ಹಾಗಿಲ್ಲದಿದ್ದರೆ ಮತ್ತೆ ಜಾಗ್ರದವಸ್ಥೆಯಲ್ಲಿಯೂ ಸ್ಥಿತಿಕಾಲದಲ್ಲಿಯೂ ಪ್ರಪಂಚವು ತೋರಿಕೊಳ್ಳುವದಕ್ಕೆ ಕಾರಣವಿರುವದಿಲ್ಲ" ಎಂದು ಕಲ್ಪಿಸುತ್ತಾರೆ. ಈ ಕಲ್ಪಿತವಾದ ಸಂಸಾರಬೀಜವು ಸರಿಯಾದ ಜ್ಞಾನವುಂಟಾಗುವವರೆಗೂ ನಾಶವಾಗುವದಿಲ್ಲ. ಏಕೆಂದರೆ ಸುಳ್ಳಾಗಿ ಕಲ್ಪಿಸಿದ್ದು ನಿಜವಾದ ಅಧಿಷ್ಠಾನದ ಜ್ಞಾನವುಂಟಾದಮೇಲೆಯೇ ಹೋದೀತು. ಹೀಗೆ ವ್ಯವಹಾರದಲ್ಲಿ ನಾಶವಿಲ್ಲವೆಂದು ಕಲ್ಪಿಸಿರುವ ಸಂಸಾರಬೀಜಕ್ಕೆ ಅಕ್ಷರ ಎಂದು ಹೆಸರು. ಆದರೆ ಆತ್ಮನ ಸ್ವರೂಪವು ಕ್ಷರವೂ ಅಲ್ಲ, ಅಕ್ಷರವೂ ಅಲ್ಲ ; ಏಕೆಂದರೆ ಇವನಲ್ಲಿ ಯಾವ ಎರಡನೆಯ ವಸ್ತುವಿನ ಅಥವಾ ಅದರ ಬೀಜದ ಸಂಪರ್ಕವೂ ಇರುವದೇ ಇಲ್ಲ, ಹೀಗೆ ಕ್ಷರ ಮತ್ತು ಅಕ್ಷರ – ಇವುಗಳೆರಡಕ್ಕಿಂತಲೂ ಆಚೆಯಿರುವದರಿಂದ ಆತ್ಮನಿಗೆ ಪುರುಷೋತ್ತಮನೆಂಬ ಹೆಸರು

ಬಂದಿದೆ ಎಂದು ಶ್ರುತಿಸ್ಮೃತಿಗಳಲ್ಲಿರುತ್ತದೆ (ಛಾಂ. ೮-೧೨-೩: ಭಗವದ್ಗೀತೆ ೧೫-೧೮).

ಪ್ರಶ್ನೆ: ಆತ್ಮನಿಗೆ ದೇಶಕಾಲವಸ್ತುಗಳಿಂದಾಗುವ ಎಲ್ಲೆಕಟ್ಟು ಯಾವದೂ ಇಲ್ಲವೆಂದು ತಾವು ಹೇಳಿದಿರಿ. ಆದರೆ ಎಲ್ಲಾ ವಸ್ತುಗಳೂ ಈ ಮೂರು ಕಟ್ಟುಗಳಿಗೆ ಒಳಪಟ್ಟೇ ಇರುವಂತೆ ತೋರುತ್ತದೆ. ಒಂದೊಂದು ವಸ್ತುವೂ ಯಾವದಾದರೊಂದು ದೇಶದವರೆಗೆ ಅಥವಾ ಕಾಲದವರೆಗೆ, ಅಥವಾ ವಸ್ತುವಿನವರೆಗೆ ಇದ್ದುಕೊಂಡಿರುತ್ತದೆ. ಹೀಗಿರುವಾಗ ಆತ್ಮನಿಗೆ ಮಾತ್ರ ಈ ಕಟ್ಟಿಲ್ಲವೆಂಬುದು ಹೇಗೆ ಸರಿಯಾದೀತು?

ಉತ್ತರ: ದೇಶಕಾಲವಸ್ತುಗಳೂ ಅನಾತ್ಮದಲ್ಲಿಯೇ ಸೇರಿವೆ. ಅನಾತ್ಮವು ಹಗ್ಗದಲ್ಲಿ ತೋರುವ ಹಾವಿನಂತೆ ಬರಿಯ ತೋರಿಕೆಯಾಗಿರುವದೆಂದು (ಪು. ೩೨-೩೩) ನಾವು ತೋರಿಸಿಕೊಟ್ಟಿರುತ್ತೇವೆ. ಹಗ್ಗದಲ್ಲಿ ತೋರುವ ಹಾವು ಹಗ್ಗದ ಸ್ವಭಾವಕ್ಕೆ ಹೇಗೆ ಪ್ರತಿಬಂಧಕವಲ್ಲವೋ ಹಾಗೆ ಆತ್ಮನಲ್ಲಿ ಅಜ್ಞಾನಕಲ್ಪನೆಯಿಂದ ತೋರುವ ದೇಶಕಾಲವಸ್ತುಗಳು ಆತ್ಮನ ಸ್ವರೂಪಕ್ಕೆ ಪ್ರತಿಬಂಧಕವಾಗಲಾರವು.

## ಆತ್ಮನನ್ನೇ ನಮಸ್ಕರಿಸಬೇಕು
(ಪ್ರಾತರ್ನಮಾಮಿ)

ಪ್ರಶ್ನೆ: ಆದ್ದರಿಂದ ಇಂಥ ಆತ್ಮವಸ್ತುವಿನ ಜ್ಞಾನವನ್ನು ಸಂಪಾದಿಸಿಕೊಂಡವರು ಏನು ಮಾಡಬೇಕೆನ್ನುತ್ತೀರಿ?

ಉತ್ತರ: ಮಾಡುವದೇನು? ಜನರು ತಮಗೆ ಬೇಕಾದ ವಸ್ತುವು ದೊರೆತರೆ ಅದರ ಪ್ರೇಮದಲ್ಲಿಯೇ ಕಾಲವನ್ನು ಕಳೆಯುತ್ತಿರುವಂತೆ ಆತ್ಮವಸ್ತುವನ್ನು ಅರಿತಾತನು, ಬೆಳಗಾಗುತ್ತಲೂ ಎದ್ದು ಅದನ್ನೇ ನೆನೆಸಿಕೊಂಡು ಅದನ್ನೇ ಭಜಿಸುತ್ತಾ ಅದರಲ್ಲಿಯೇ ಮುಳುಗಿ ದಿನವನ್ನೆಲ್ಲ ಆ ಆನಂದದಲ್ಲಿಯೇ ಕಳೆಯುತ್ತಿರುವನು. ಅವನಿಗೆ ಇಂಥದ್ದನ್ನು ಮಾಡಬೇಕೆಂದಾಗಲಿ ಇಂಥದ್ದನ್ನು ಬಿಡಬೇಕೆಂದಾಗಲಿ ಯಾವ ನಿರ್ಬಂಧವೂ ಇರುವದಿಲ್ಲ. ಏಕೆಂದರೆ ಅವನು ಕೃತಕೃತ್ಯನಾಗಿರುತ್ತಾನೆ. ಆದ್ದರಿಂದಲೇ ಶ್ರುತಿಯಲ್ಲಿ 'ಈತನು ಹೀಗೆಂದು

ಕಂಡುಕೊಂಡು ಹೀಗೇ ಮನನಮಾಡಿ, ಹೀಗೆಂದು ಅರಿತುಕೊಂಡು ಆತ್ಮರತಿಯಾಗಿ, ಆತ್ಮಕ್ರೀಡನಾಗಿ, ಆತ್ಮಮಿಥುನನಾಗಿ, ಆತ್ಮಾನಂದನಾಗಿ ಸ್ವಾರಾಜ್ಯವನ್ನನುಭವಿಸುತ್ತಾನೆ. ಅವನಿಗೆ ಎಲ್ಲಾ ಲೋಕಗಳಲ್ಲಿಯೂ ಮನಬಂದಂತೆ ಸಂಚಾರವಿರುತ್ತದೆ' (ಸ ವಾ ಏಷ ಏವಂ ಪಶ್ಯನ್ .... ಸ ಸ್ವರಾಡ್ಭವತಿ ಛಾಂ. ೭-೨೫-೨) ಎಂದು ಹೇಳಿದೆ. 'ಇದನ್ನು ಅರಿತುಕೊಂಡವನು ಜ್ಞಾನಿಯೂ ಕೃತಕೃತ್ಯನೂ ಆಗುವನು' (ಏತದ್ಬುದ್ಧ್ವಾ.... ಗೀ. ೧೫-೨೦) ಎಂದು ಭಗವದ್ಗೀತೆಯಲ್ಲಿಯೂ ಹೇಳಿದೆ.

# ೪. ಈ ಸ್ತೋತ್ರವನ್ನು ಹೇಳಿಕೊಳ್ಳುವವರಿಗೆ ಫಲ

ಶ್ಲೋಕತ್ರಯಮಿದಂ ಪುಣ್ಯಂ
ಲೋಕತ್ರಯವಿಭೂಷಣಮ್ ।
ಪ್ರಾತಃಕಾಲೇ ಪಠೇದ್ಯಸ್ತು
ಸ ಗಚ್ಛೇತ್ಪರಮಂ ಪದಮ್ ॥ ೪ ॥

ಪ್ರತಿಪದಾರ್ಥ :– ಲೋಕತ್ರಯ ವಿಭೂಷಣಮ್– ಮೂರು ಲೋಕಕ್ಕೂ ಭೂಷಣವಾದ, ಪುಣ್ಯಮ್– ಮಂಗಲಕರವಾದ, ಇದಂ– ಈ, ಶ್ಲೋಕತ್ರಯಮ್– ಮೂರು ಶ್ಲೋಕಗಳನ್ನು, ಯಸ್ತು–ಯಾವನಾದರೆ, ಪ್ರಾತಃಕಾಲೇ–ಬೆಳಗಿನ ಹೊತ್ತಿನಲ್ಲಿ, ಪಠೇತ್– ಹೇಳುತ್ತಾನೋ, ಸಃ– ಆತನು, ಪರಮಮ್– ಉತ್ಕೃಷ್ಟವಾದ, ಪದಮ್–ಸ್ಥಾನವನ್ನು, ಗಚ್ಛೇತ್–ಪಡೆಯುವನು.

೪. ಪುಣ್ಯಕರವಾದ ಈ ಮೂರು ಶ್ಲೋಕವು ಮೂರು ಲೋಕಕ್ಕೂ ಭೂಷಣವಾಗಿರುತ್ತದೆ. ಯಾರು ಇದನ್ನು ಬೆಳಗಿನ ಹೊತ್ತಿನಲ್ಲಿ ಹೇಳಿಕೊಳ್ಳುವರೋ, ಅವರು ಪರಮಪದವನ್ನೇ ಹೊಂದುವರು.

ಪ್ರಶ್ನೆ : ಈ ಪ್ರಕರಣದಲ್ಲಿ ಹೇಳಿರುವ ವಿಚಾರಗಳನ್ನು ಚೆನ್ನಾಗಿ ತಿಳಿದುಕೊಳ್ಳುವದಕ್ಕೆ ಯೋಗ್ಯತೆಯಿಲ್ಲದವರು ಏನು ಮಾಡಬೇಕು ?

ಉತ್ತರ : ಅವರಿಗೂ ಮಾರ್ಗವುಂಟು. ಅವರು ಪ್ರತಿದಿನವೂ ಬೆಳಗ್ಗೆ ಎದ್ದು ಈ ಶ್ಲೋಕಗಳನ್ನು ಹೇಳಿಕೊಳ್ಳುತ್ತಾ ಬರಬೇಕು. ಇವು ಮಹಾ ಮಂಗಲಕರವಾದ ಬ್ರಹ್ಮವಸ್ತುವಿನ ವಿಚಾರಗಳನ್ನೊಳಗೊಂಡಿರುವದರಿಂದ ಈ ಸ್ತೋತ್ರಪಾಠದಿಂದಲೇ ಅವರಿಗೆ ಅಧಿಕವಾದ ಪುಣ್ಯವು ಲಭಿಸುವದು. ಇದಲ್ಲದೆ ಈ ಶ್ಲೋಕಗಳಲ್ಲಿರುವ ವಿಚಾರವು ಸ್ವರ್ಗಮರ್ತ್ಯಪಾತಾಳವೆಂಬ ಮೂರು ಲೋಕಗಳಿಗೂ ಭೂಷಣಪ್ರಾಯವಾಗಿರುತ್ತದೆ. ಅಥವಾ ಲೋಕವೆಂದರೆ ಅನುಭವ, ಆದ್ದರಿಂದ ಲೋಕತ್ರಯವೆಂದರೆ ಮೂರು ಅವಸ್ಥೆಗಳ ವಿಚಾರ

ದಿಂದ ತಿಳಿಯಬೇಕಾದ ಆತ್ಮತತ್ತ್ವವನ್ನು ತಿಳಿಯಪಡಿಸುವ ಈ ಶ್ಲೋಕಗಳು ಮೂರು ಅವಸ್ಥೆಗಳಿಗೂ ಭೂಷಣವಾಗಿರುತ್ತವೆ.

ಆದ್ದರಿಂದ ಈ ಶ್ಲೋಕಗಳನ್ನು ಬೆಳಗಿನ ಜಾವದಲ್ಲಿ ಹೇಳಿಕೊಳ್ಳುತ್ತಾ ಬರುವದರಿಂದ ಆದರಿಂದುಂಟಾದ ಪುಣ್ಯದ ಬಲದಿಂದ ಚಿತ್ತಶುದ್ಧಿಯಾಗುವದು; ಎಂದರೆ ಮನಸ್ಸಿಗೆ ಇಂಥ ವಿಷಯಗಳನ್ನು ಗ್ರಹಿಸುವ ಶಕ್ತಿಯುಂಟಾಗುವದು. ಆಮೇಲೆ ಇದರಲ್ಲಿ ಹೇಳಿರುವ ಅರ್ಥದ ಶ್ರವಣ, ಮನನ, ನಿದಿಧ್ಯಾಸನ- ಇವುಗಳಿಂದ ಆತ್ಮತತ್ತ್ವದ ಪೂರ್ಣಜ್ಞಾನವೇ ಆಗುವದು. ಶ್ರವಣವೆಂದರೆ ದೊಡ್ಡವರಿಂದ ಈ ವಿಷಯುವನ್ನು ಕೇಳಿ ತಿಳಿದುಕೊಳ್ಳುವದು; ಮನನವೆಂದರೆ ಕೇಳಿದರ್ಥವನ್ನು ಮತ್ತೆಮತ್ತೆ ತರ್ಕಕ್ಕೆ ಹೊಂದಿಸಿಕೊಂಡು ವಿಚಾರಮಾಡುವದು ; ನಿದಿಧ್ಯಾಸನವೆಂದರೆ ಈ ವಿಷಯದಲ್ಲಿಯೇ ಮನಸ್ಸನ್ನಿಟ್ಟು ತನ್ನ ಅನುಭವಕ್ಕೆ ಅಳವಡಿಸಿಕೊಳ್ಳುವದು. ಇಂಥ ಶ್ರವಣಮನನ ನಿದಿಧ್ಯಾಸನಗಳನ್ನು ಮಾಡುವದೇ ಮುಮುಕ್ಷುಗಳಿಗೆ ಮಂಗಲಕರವು.

# ಶಬ್ದಾನುಕ್ರಮಣಿಕೆ

## ( ಈ ಪ್ರಕರಣದಲ್ಲಿ ಉಪಯೋಗಿಸಿರುವ ಪಾರಿಭಾಷಿಕಶಬ್ದಗಳ ಅರ್ಥ )

ಅರ್ಥದ ವಿವರದಲ್ಲಿ ಒಂದು ಮಾತನ್ನು ಕಪ್ಪಕ್ಷರದಲ್ಲಿ ಅಚ್ಚುಮಾಡಿದ್ದರೆ ಆ ಮಾತಿನ ವಿವರವನ್ನು ನೋಡಿ ಎಂದರ್ಥ.

ಅಕ್ಷರ – ಸುಷುಪ್ತಿಪ್ರಲಯಗಳಲ್ಲಿರುವದೆಂದು ಅಜ್ಞಾನಿಗಳು ಕಲ್ಪಿಸಿಕೊಂಡಿರುವ ಸಂಸಾರ ಬೀಜ.

ಅನಾತ್ಮ – ಆತ್ಮನಲ್ಲದ್ದು. ದೇಹ, ಪ್ರಾಣ, ಮನಸ್ಸು, ಇಂದ್ರಿಯಗಳು, ವಿಷಯಗಳು– ಈ ಎಲ್ಲವೂ ಇದರಲ್ಲಿ ಅಡಕವಾಗಿರುತ್ತವೆ.

ಅಜ್ಞಾನ – ಅರಿಯದಿರುವದು, ತಪ್ಪುತಿಳಿವಳಿಕೆ. ಆತ್ಮಸ್ವರೂಪವನ್ನು ಇದ್ದದ್ದು ಇದ್ದಂತೆ ತಿಳಿಯದೆ, ಅದು ದೇಹಾದಿಗಳೆಂದು ತಪ್ಪಾಗಿ ತಿಳಿದುಕೊಂಡಿರುವದು.

ಅವಸ್ಥಾತ್ರಯ – ಅವಸ್ಥೆಯೆಂದರೆ ಸ್ಥಿತಿ. ಎಚ್ಚರ, ಕನಸು, ತನಿನಿದ್ರೆ – ಇವುಗಳನ್ನೇ ಇಲ್ಲಿ ಅವಸ್ಥಾತ್ರಯವೆಂದು ಕರೆದಿದೆ.

ಅವಿದ್ಯೆ – ಅರಿಯದಿರುವದು, ತಪ್ಪುತಿಳಿವಳಿಕೆ ; ಅಜ್ಞಾನ.

ಅಹಂಕಾರ – ನಾನೆಂಬ ಅಭಿಮಾನ.

ಆತ್ಮ – ತಾನು, ತನ್ನ ಸ್ವರೂಪ. ನಮ್ಮೆಲ್ಲರ ಸ್ವರೂಪವು ಒಬ್ಬ ಆತ್ಮನೇ ಎಂದು ವೇದಾಂತದಲ್ಲಿ ಹೇಳಿದೆ.

ಆನಂದ – ಆತ್ಮನ ನಿಜವಾದ ರೂಪದಲ್ಲಿ ದುಃಖದ ಸೋಂಕಿಲ್ಲವೆಂಬುದನ್ನು ತಿಳಿಸುವದಕ್ಕೆ ಉಪಯೋಗಿಸುವ ಮಾತು.

ಇಂದ್ರಿಯ – ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ – ಇವುಗಳಲ್ಲಿರುವ ಅರಿವಿನ ಸಾಧನಗಳು. ಇವುಗಳನ್ನು ಜ್ಞಾನೇಂದ್ರಿಯಗಳೆಂದು ಕರೆಯುವ ರೂಢಿಯುಂಟು.

ಉಪಲಕ್ಷಣ – ಯಾವದಾದರೊಂದು ವಸ್ತುವಿನ ಸ್ವರೂಪಕ್ಕೆ ಸೇರದೆ ಅದನ್ನು ತೋರಿಸುವ ಗುರುತು.

ಕ್ಷರ – ನಾಶವಾಗುವ ವಸ್ತು.

ಚೈತನ್ಯ – ಅರಿವು ; ಆತ್ಮನ ಸ್ವರೂಪವು ಚೈತನ್ಯವೇ.

ಜಾಗರ, ಜಾಗರಿತ, ಜಾಗ್ರತ್ತು – ಎಚ್ಚರ.

ತತ್ತ್ವ – ಯಾವದು ಹೇಗೆ ಇರುವದೋ ಆ ರೂಪ.

ತುರೀಯ – ನಾಲ್ಕನೆಯದು. ಎಚ್ಚರಕನಸುನಿದ್ರೆಗಳನ್ನು ಮೀರಿರುವ ಆತ್ಮನ ರೂಪ.

ನಿದಿಧ್ಯಾಸನ – ಮನಸ್ಸಿಟ್ಟು ನೋಡಿ ಅನುಭವಕ್ಕೆ ಅಳವಡಿಸಿಕೊಳ್ಳುವದು.

ನಿರ್ಗುಣ – ಯಾವ ಧರ್ಮವೂ ಇಲ್ಲದ್ದು.

ನಿರ್ವಿಶೇಷ – ಇಂಥ ರೂಪವೆಂಬುದಿಲ್ಲದ್ದು.

# ಕೆಲವು ಗ್ರಂಥಗಳು

ವೇದಾಂತಪ್ರವೇಶಿಕೆ : ಶ್ರೀ ಶಂಕರಾಚಾರ್ಯರ 'ಅದ್ವೈತಪಂಚರತ್ನಸ್ತೋತ್ರ'ದ ಮೂಲ, ಅರ್ಥ, ವಿವರಣೆಗಳನ್ನೊಳಗೊಂಡಿರುವ ಪ್ರಕರಣವಿದು. ನಮ್ಮೆಗಳ ಆತ್ಮನು ಸರ್ವಸಂಸಾರಧರ್ಮರಹಿತನಾದ ಸಚ್ಚಿದಾನಂದನು ; ಪ್ರಪಂಚವು ಆತ್ಮನಿಗಿಂತ ಬೇರೆಯಾಗಿರುವದಿಲ್ಲ – ಎಂಬುದನ್ನು ಸಯುಕ್ತಿಕವಾಗಿ ಮನಗಾಣಿಸುತ್ತದೆ. ಹೊಸ ಸಂಸ್ಕರಣ

ಪುಟಗಳು ೭೮

ಶಂಕರಮಹಾಮನನ : ವೇದಾಂತಪ್ರಕ್ರಿಯೆಯ ಗುಟ್ಟನ್ನೆಲ್ಲ ಶ್ರೀಶಂಕರ ಭಗವತ್ಪಾದರವರ ಅಮೃತವಾಣಿಯಿಂದಲೇ ಹೊರಗೆಡವಿರುವ ಪುಟ್ಟ ಹೊತ್ತಗೆಯಿದು. ಹೊಸದಾಗಿ ಓದುವವರಿಗೆ ವೇದಾಂತದ ಒಟ್ಟು ಉಪದೇಶವನ್ನೂ ಆಗಲೆ ಓದಿರುವವರಿಗೆ ಅನುಸಂಧಾನಕ್ಕೆ ತಕ್ಕ ಸಂಗ್ರಹವನ್ನೂ ಒದಗಿಸುವದು.

ಪುಟಗಳು ೩೮

ಅಧ್ಯಾತ್ಮವೆಂದರೇನು ? : ಅಧ್ಯಾತ್ಮ ಎಂಬ ಮಾತಿನ ಅರ್ಥವಿವರಣೆಗಾಗಿ ಹೊರಟಿರುವ ಪ್ರಶ್ನೋತ್ತರರೂಪವಾದ ಚಿಕ್ಕ ಹೊತ್ತಗೆ. ಅಧ್ಯಾತ್ಮವಿದ್ಯೆಯು ಮಾನವ ಜೀವನದಲ್ಲಿ ಕಾಣಬರುವ ಎಲ್ಲಾ ತೊಡಕುಗಳನ್ನೂ ಬಿಚ್ಚಿಕೊಳ್ಳುವ ಉಪಾಯವನ್ನು ತೋರಿಸಿಕೊಡುವದೆಂಬುದನ್ನು ಮನಗಾಣಿಸುವದು.

ಪುಟಗಳು ೧೮

ವೇದಾಂತಕಥಾವಳಿ : ಇದರಲ್ಲಿ ಇಪ್ಪತ್ತೊಂದು ಪುಟ್ಟ ಕಥೆಗಳಿವೆ. ಒಂದೊಂದು ಕಥೆಯ ಕೆಳಗೂ ಅದರಿಂದ ತಿಳಿದುಕೊಳ್ಳಬೇಕಾದ ತತ್ತ್ವವನ್ನು ಸರಳವಾದ ಭಾಷೆಯಲ್ಲಿ ವಿವರಿಸಿದೆ. ವೇದಾಂತವಿಷಯದ ಎಷ್ಟೋ ತಪ್ಪುತಿಳಿವಳಿಕೆಗಳು ಇದನ್ನು ಓದುವದರಿಂದ ಮಾಯವಾಗುವವು. ಮೊದಲನೆಯ ಸಲಕ್ಕೆ ವೇದಾಂತಗ್ರಂಥವನ್ನು ಓದುವವರಿಗೆ ತಕ್ಕದ್ದಾಗಿದೆ.

ಪುಟಗಳು ೬೮

ರಸನಿಮಿಷಗಳು–೧ : ಮಾನವಜೀವನವು ಆನಂದಮಯವಾಗಿರುವದಕ್ಕೆ ಅನುಸಂಧಾನಮಾಡಬೇಕಾಗಿರುವ ತತ್ತ್ವವನ್ನು ಉದಾಹರಣೆಗಳ ಮೂಲಕ ಮನೋಹರವಾಗಿ ವರ್ಣಿಸಿದೆ. ಇವುಗಳನ್ನು ಓದುವಾಗ ವಾಚಕರಿಗೆ ಒಂದೊಂದು ನಿಮಿಷವೂ ರಸಮಯವಾಗಿರುವದೆಂಬುದರಲ್ಲಿ ಸಂದೇಹವಿಲ್ಲ.

ಪುಟಗಳು ೨೮

ಪುಸ್ತಕಗಳ ಪೂರ ಬೆಲೆಪಟ್ಟಿಗೆ ಬರೆದುಕೊಳ್ಳಿ

---

ಕಾರ್ಯದರ್ಶಿ,

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.

( ಹಾಸನ ಡಿಸ್ಟ್ರಿಕ್ಟ್, ದಕ್ಷಿಣ ರೈಲ್ವೆ. )